# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE    Vol XX - 12    ಡಿಸೆಂಬರ್ 2002


## ಈ ಸಂಚಿಕೆಯಲ್ಲಿ


| | | |
|---|---|---|
| ಅಸೋಸಿಯೇಷನ್‌ನಲ್ಲಿ | • ರಮಾ ವಸಂತ್ | 2 |
| ಡಾ\| ಮಂಜುನಾಥರ ಎರಡು ನಾಟಕಗಳ ಬಿಡುಗಡೆ | • ಡಾ. ಜಿ. ಎನ್. ಉಪಾಧ್ಯ | 3 |
| 'ಬಿಸಿಲ್ಗುದುರೆ'ಯ ಬೆನ್ನಹಿಂದೆ... | • ಡಾ. ತಾಳ್ತಜೆ ವಸಂತಕುಮಾರ್ | 4 |
| ಭಾರತೀಯ ಕಲೆ - ಭಾಗ 10 | | |
| ಕೃಪೆ : ಎನ್. ಮರಿಶಾಮಾಚಾರ್‌ರವರ ಭಾರತೀಯ ಕಲೆ | | 6 |
| ಗಾನ ಕಲಾ ಸಿಂಧು ವಿದ್ವಾನ್ ಡಿ. ಸುಬ್ಬರಾಮಯ್ಯನವರ ಜನ್ಮ ಶತಮಾನೋತ್ಸವ ಅರ್ಥಪೂರ್ಣ ಸ್ಮರಣೆ | | 10 |
| ಸುತ್ತ-ಮುತ್ತ | | 10 |



The Mysore Association, Mumbai
393, Bhaudaji Road, Matunga, Mumbai-400 019.
Tel.: 402 46 47 • Grams: "KARUNADU"

**ಅಸೋಸಿಯೇಶನ್‌ನಲ್ಲಿ**

ಮೈಸೂರು ಅಸೋಸಿಯೇಶನ್ ಹಾಗೂ ಉದಯನ ಈ ಎರಡು ಸಂಸ್ಥೆಗಳ ಜಂಟಿ ಆಶ್ರಯದಲ್ಲಿ ಶನಿವಾರ ನವೆಂಬರ್ 16ರಂದು 'She' ಎಂಬ ನೃತ್ಯ ನಾಟಕವನ್ನೇರ್ಪಡಿಸಲಾಗಿತ್ತು. ಅಭಿನಯಿಸಿದವರು ಲಂಡನ್ನಿನಲ್ಲಿರುವ ಶ್ರೀಮತಿ ನೀನಾ ರಾಜಾರಾಣಿ, ಶ್ರೀಮತಿ ಪಾಲಚಂದ್ರ ಮತ್ತು ತಂಡದವರು, ಶ್ರೀಮತಿ ನಳಿನಿಯವರು ಕಲಾವಿದರ ಪರಿಚಯ ಮಾಡಿಕೊಟ್ಟ ನಂತರ ಅಸೋಸಿಯೇಶನ್ನಿನ ಅಧ್ಯಕ್ಷರಾದ ಶ್ರೀ ದೊರೆಸ್ವಾಮಿ ಅವರು ಕಲಾವಿದರಿಂದ ಪುಷ್ಪಗುಚ್ಛವನ್ನು ನೀಡಿ ಗೌರವಿಸಿದರು.



*ಮೈಸೂರು ಅಸೋಸಿಯೇಶನ್ನಿನ ಅಧ್ಯಕ್ಷರಿಂದ ನೃತ್ಯ ನಾಟಕ 'ಶ್ರೀ'ಯ ಕಲಾವಿದರಿಗೆ ಪುಷ್ಪ ಗುಚ್ಛ ಕೊಟ್ಟು ಗೌರವಾರ್ಪಣೆ ಮಾಡುತ್ತಿರುವುದು.*

ನಂತರ ನೃತ್ಯ ಕಾರ್ಯಕ್ರಮವು ಆರಂಭವಾಯಿತು. ಈ ನೃತ್ಯ ನಾಟಕವು ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ಎತ್ತಿ ತೋರಿಸಿದೆ. 'ಯತ್ರ ನಾರ್ಯಂತು ಪೂಜ್ಯಂತೇ ತತ್ರ ರಮ್ಯಂತೇ ದೇವತಾ' ಎನ್ನುತ್ತಾರೆ. ನಮ್ಮ ಸಂಸ್ಕೃತಿಯಲ್ಲಿ ಸ್ತ್ರೀಗೆ ವಿಶೇಷ ಸ್ಥಾನ ಮಾನಗಳಿವೆ. ಪೂಜ್ಯನೀಯಳಾಗಿದ್ದಾಳೆ. ನರ್ತಕಿಯರು ರಕ್ಷಣೆಗಾಗಿ ವಿಷ್ಣುವಿನ ಮೊರೆ ಹೋದಾಗ ವಿಷ್ಣು ಹೇಳುತ್ತಾನೆ. 'ಸೃಷ್ಟಿಯ ರಕ್ಷಣೆಯೇ ನನ್ನ ಕರ್ತವ್ಯ. ಆದರೆ ಈ ಅಷ್ಟ ಶಕ್ತಿ ಎಂದರೆ ಏನು? ಯಾರು? 'ಅಷ್ಟ ಭುಜ ನಾರೀ' ಎಂದು ಸ್ತ್ರೀಯು ಎಂಟು ರೂಪುಗಳಲ್ಲಿ ಶಕ್ತಿಯನ್ನು ಹೊಂದಿರುತ್ತಾಳೆ. ಶ್ರೀ, ಭೂ, ಸರಸ್ವತಿ, ಪುಷ್ಟಿ, ತುಷ್ಟಿ, ಕೀರ್ತಿ, ಶಾಂತಿ, ಪ್ರೀತಿ ಹೀಗೆ.... ಪ್ರತಿರೂಪದಲ್ಲಿಯೂ ಒಂದು ದೇವತೆಯ ಸಾನಿಧ್ಯವಿರುತ್ತದೆ. ಐಶ್ವರ್ಯ, ಕೀರ್ತಿ, ಶಾಂತಿ, ಆರೋಗ್ಯ, ಪ್ರೀತಿ ಎಲ್ಲವನ್ನೂ ನೀಡುತ್ತಾಳೆ. ಸಂಖ್ಯೆ 'ಎಂಟು' ಎಂಬುದು ವಿಶೇಷತೆಯಿಂದ ಕೂಡಿದೆ.

'ಅಷ್ಟ ದಿಕ್ಪಾಲಕರು', 'ಅಷ್ಟ ಮಹಿಷಿಯರು', 'ಅಷ್ಟೈಶ್ವರ್ಯ', 'ಅಷ್ಟಗ್ರಹ', 'ಅಷ್ಟಾಂಗಯೋಗ'. ಹೀಗೆ ಸಂಖ್ಯಾ ಶಾಸ್ತ್ರದಲ್ಲಿ ಪ್ರತಿ ಸಂಖ್ಯೆಗೂ ವಿಶೇಷ ಸ್ಥಾನವಿದೆ. ಶ್ರೀಮತಿ ರಾಜಾರಾಣಿ ಮತ್ತು ಪಾಲಿಚಂದ್ರ ಇಬ್ಬರೂ ಈ 8 ರೂಪಗಳನ್ನು ಬಹಳ ಭಾವನಾತ್ಮಕವಾಗಿಯೂ ರಸಪೂರ್ಣವಾಗಿಯೂ ಅಭಿನಯಿಸಿ ನೃತ್ಯ ಪ್ರಸ್ತುತಪಡಿಸಿದರು. ಶ್ರೀಮತಿ ನಳಿನಿಯವರು ಹೇಳಿದಂತೆ ಪ್ರತಿ ಮನೆಯಲ್ಲೂ ತಾಯಿಯ ರೂಪದಲ್ಲೋ ಅಥವಾ ಪತ್ನಿಯ ರೂಪದಲ್ಲೋ ಈ 8 ದೇವತೆಗಳ ಸನ್ನಿಧಾನವಿರುತ್ತದೆ. ಇದರಿಂದಾಗಿ ನಮ್ಮಲ್ಲಿ ಸ್ತ್ರೀಯರಿಗೆ ವಿಶಿಷ್ಟ ಸ್ಥಾನ.

(ಪುಟ 11ಕ್ಕೆ)



*ನೃತ್ಯ ನಾಟಕ 'ಶ್ರೀ' ಇದರ ಒಂದು ದೃಶ್ಯ*

**31st December 2002**

**New year Evening Get-together**

**THE MYSORE ASSOCIATION, BOMBAY**

**&**

**THE KARNATAKA GANAKALA PARISHAT**

**Present**

***A unique Music Conference Of Young artists***

**On**

**4th & 5th January 2003**

Over 50 artists from Karnataka will be attending the conference

The Main objective of this conference is


- Bring about a close interaction between the young artists of Mumbai and the visiting artists from Karnataka
- Showcasing the young talents with potential in various fields of music and the contribution of the Music teaching institutions by organizing converts/bringing out a compendium, giving profiles of artists and teaching institutions of Mumbai.
- Bringing about a close interaction between senior musicians and upcoming artists.
- Stimulating interest of the artists and participants with:
  - Seminar and discussions on different aspects of music.
  - 4-5 Lecture Demonstrations
  - Numerous concerts - featuring leading young artist like Vijaya Shiva, Kasaravalli Sisters, Anuradha Pal, Jayashree Mahesh, Balashahi and others.
  - Exhibition on the history of music and eminent musicians.

Karnataka Ganakala Parishat shall be conferring the prestigious title of 'Ganakala Shree' on the chosen young artist at this conference.

This is a unique kind of Music Conference, which is being organized for the first time in Mumbai

***Do not miss this opportunity! Enroll yourself as a delegate today!***

# ಡಾ| ಮಂಜುನಾಥರ ಎರಡು ನಾಟಕಗಳ ಬಿಡುಗಡೆ




*'ಬಿಸಿಲ್ಗುದುರೆ ಮತ್ತು ನಾ 'ದ್ಯಾವ್ರನ್ನೋಡ್ ಬ್ಯಾಕು'*
*ನಾಟಕದ ಪುಸ್ತಕಗಳನ್ನು ಡಾ. ತಾಳ್ತಜೆ ವಸಂತಕುಮಾರ್ ಮಾಡುತ್ತಿರುವುದು.*

ನವಂಬರ್ 29 ಡಾ. ಬಿ.ಆರ್. ಮಂಜುನಾಥರ 'ಬಿಸಿಲ್ಗುದುರೆ' ನಾಟಕ ಆಕರ್ಷಕ ಬರವಣಿಗೆಯಾಗಿದ್ದು ಕ್ರಿಯಾಪೇಕ್ಷಿ ಪಾತ್ರಗಳನ್ನು ಹೊಂದಿದೆ. ಇಲ್ಲಿ ಲೇಖಕರು ಪಾತ್ರಗಳ ಆಂತರಿಕ ಸಂಘಗಳನ್ನು ನೆಲೆಗಳನ್ನು ಶೋಧಿಸುತ್ತ ಹೋಗುತ್ತಾರೆ. ಸಂಭಾಷಣೆಗಳ ಮುಖಾಂತರ ಪಾತ್ರಗಳ ಅಂತರ್ ದರ್ಶನ ಮಾಡುತ್ತಾರೆ. ತೀವ್ರವಾದ ಓಟವನ್ನು ಹೊಂದಿರುವ ಈ ನಾಟಕ ರಂಗದ ಮೇಲೆ ಬಂದಾಗ ಅದ್ಭುತವಾದ ಪರಿಣಾಮ ಬೀರಬಲ್ಲದು. ಒಟ್ಟಿನಲ್ಲಿ ಇದೊಂದು ಯೋಚನೆಗೆ ಹಚ್ಚುವ ನಾಟಕ ಎಂಬುದಾಗಿ ಖ್ಯಾತ ವಿದ್ವಾಂಸರೂ ವಿಮರ್ಶಕರೂ ಆದ ಡಾ. ತಾಳ್ತಜೆ ವಸಂತಕುಮಾರ್ ಅಭಿಪ್ರಾಯ ಪಟ್ಟರು.

ಅವರು ಮೈಸೂರು ಅಸೋಸಿಯೇಶನ್ ಮುಂಬಯಿ ಹಾಗೂ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಸಂಯುಕ್ತವಾಗಿ ಮಾಟುಂಗಾದ ಮೈಸೂರು ಅಸೋಸಿಯೇಶನ್‌ನ ಕಿರು ಸಭಾಗೃಹದಲ್ಲಿ ಆಯೋಜಿಸಿದ್ದ ಕೃತಿ ಬಿಡುಗಡೆ ಸಮಾರಂಭದಲ್ಲಿ ಡಾ| ಬಿ. ಆರ್. ಮಂಜುನಾಥರ 'ಬಿಸಿಲ್ಗುದುರೆ' ನಾಟಕವನ್ನು ಬಿಡುಗಡೆಗೊಳಿಸಿ ಅನಂತರ ವಿಶ್ಲೇಷಿಸಿದರು.

ಡಾ| ಮಂಜುನಾಥರ ಇನ್ನೊಂದು ನಾಟಕ 'ನಾ ದ್ಯಾವ್ರನ್ನೋಡ್ ಬ್ಯಾಕು' ಕೃತಿಯನ್ನು ಇದೇ ಸಂದರ್ಭದಲ್ಲಿ ಖ್ಯಾತ ಕಾದಂಬರಿಕಾರ, ನಾಟಕಕಾರರೂ ಆದ ಡಾ. ವ್ಯಾಸರಾವ್ ನಿಂಜೂರು ಬಿಡುಗಡೆಗೊಳಿಸಿದರು. ಅನಂತರ ಅವರು ತಮ್ಮ ಭಾಷಣದಲ್ಲಿ 'ನಾ ದ್ಯಾವ್ರನ್ನೋಡ್ ಬ್ಯಾಕು' ನಾಟಕ ಹಲವು ವಿಧಗಳಲ್ಲಿ ವಿಶಿಷ್ಟವಾಗಿದೆ. ಇದು ಓದಿಗಷ್ಟೇ ಸೀಮಿತವಾಗದೆ ರಂಗಕ್ಕೂ ಸೈ ಅನ್ನಿಸಿದೆ. ಇಲ್ಲಿ ಜಾನಪದ ಹಾಸು ಹೊಕ್ಕಾಗಿ, ಮೇಳ ಪಾತ್ರವಾಗಿ ವಿಜೃಂಭಿಸಿದೆ. ನಾಟಕದ ಭಾಷೆ ಕಾವ್ಯಕ್ಕೆ ಹತ್ತಿರವಾಗಿದ್ದು ಇಲ್ಲಿನ ದೃಶ್ಯಗಳೂ ಕಾವ್ಯವಾಗಿವೆ. ಡಾ. ಬಿ.ಆರ್. ಮಂಜುನಾಥರು ಈ ನಾಟಕದ ಮೂಲಕ ಸ್ಥಾವರ ಜಂಗಮ ಹಾಗೂ ಮನುಷ್ಯ ಸಂಬಂಧವನ್ನು, ಇನ್ನೊಂದೆಡೆಯಲ್ಲಿ ಪರಿಸರ ಹಾಗೂ ಮನುಷ್ಯ ಸಂಬಂಧವನ್ನು ಶೋಧಿಸಿದ್ದಾರೆ. ಈ ನಾಟಕ ನಿರ್ದೇಶಕನಿಗೆ ಒಂದು ಪಂಥಾಹ್ವಾನ ಎಂದರು.



*'ಬಿಸಿಲ್ಗುದುರೆ' ಮತ್ತು 'ನಾ ದ್ಯಾವ್ರನ್ನೋಡ್ ಬೇಕು'*
*ನಾಟಕದ ಪುಸ್ತಕ ಬಿಡುಗಡೆ ಸಮಾರಂಭಕ್ಕೆ ನೆರೆದ ಅಭಿಮಾನಿಗಳು.*

ನಾಟಕಗಳ ರಂಗಸಾಧ್ಯತೆ ಬಗ್ಗೆ ಮಾತನಾಡಿದ ಭರತ್‌ಕುಮಾರ್ ಪೊಲಿಪು ಅವರು 'ಬಿಸಿಲ್ಗುದುರೆ' ಹಾಗೂ 'ನಾ ದ್ಯಾವ್ರನ್ನೋಡ್ ಬ್ಯಾಕು' ಅದ್ಭುತ ರಂಗ ಕಲ್ಪನೆಗಳಿರುವ ನಾಟಕಗಳಾಗಿದ್ದು ಡಾ. ಬಿ.ಆರ್. ಮಂಜುನಾಥರ ಸೃಜನ ಶೀಲತೆಗೆ ಸಾಕ್ಷಿಯಾಗಿದೆ. ವಸ್ತುವಿನ ಆಯ್ಕೆ ಹಾಗೂ ನಾಟಕದಲ್ಲಿ ವಸ್ತು ಬೆಳೆಯುವ ಪರಿ ಈ ರಂಗ ಕೃತಿಗಳ ಯಶಸ್ಸಿಗೆ ನಿದರ್ಶನವಾಗಿದೆ. ಡಾ. ಮಂಜುನಾಥರು ಸ್ವತಃ ನಿರ್ದೇಶಕರಾದ್ದರಿಂದ ನಾಟಕದ ರಚನೆ ರಂಗ ಕೃತಿಯಾಗಿ ಗೆಲುವನ್ನು ಪಡೆದಿದೆ. ಎರಡು ನಾಟಕಗಳಲ್ಲಿ ರಂಜನೆ-ಚಿಂತನೆಗೆ ಅಪಾರ ಅವಕಾಶವಿದ್ದು ಭಾಷೆ

(ಪುಟ 9ಕ್ಕೆ)




*'ನಾ ದ್ಯಾವ್ರನ್ನೋಡ್‌ಬೇಕು' ಗೀತೆ - ಮೈಸೂರು ಅಸೋಸಿಯೇಷನ್‌ನ್ನಿನ ಕಲಾವಿದರಿಂದ.*

ಡಾ. ಮಂಜುನಾಥರ ನಾಟಕ ಬಿಸಿಲ್ಗುದುರೆಯ ಕೃತಿ ಬಿಡುಗಡೆ (೨೫.೧೧.೦೨)ಯ ಭಾಷಣದ ಪರಿಷ್ಕೃತ ರೂಪ

✍ ಡಾ. ತಾಳ್ತಜೆ ವಸಂತಕುಮಾರ

# 'ಬಿಸಿಲ್ಗುದುರೆ'ಯ ಬೆನ್ನಹಿಂದೆ...

ನಾಟಕವು ಪ್ರತ್ಯಪ್ರತ್ಯೇಕ ಮಾಧ್ಯಮಗಳ ಸಹಕಾರವನ್ನು ನಿರೀಕ್ಷಿಸುವ, ಕಲಾ ಸಮುಚ್ಛಯವಾಗಿದೆ. ಸಫಲ ನಾಟಕಕಾರನಿಗೆ ಭಾಷೆಯ ಒಳಮರ್ಮ, ದೇಹ-ಭಂಗಿ - ಮುಖಭಾವಗಳ ಪರಿಮಾಣ ಮತ್ತು ಪರಿಣಾಮಗಳ ಪೂರ್ವಕಲ್ಪನೆ, ರಂಗಾಂತರಂಗದ ಸೂಕ್ಷ್ಮಗಳು, ದಿಗ್ದರ್ಶನ ಸೌಲಭ್ಯಗಳೆಲ್ಲವನ್ನೂ ಏಕಸೂತ್ರದಲ್ಲಿ ಸಂಗ್ರಹಿಸುವ ಸಾಮರ್ಥ್ಯವಿರ ಬೇಕಾಗುತ್ತದೆ. ಇವುಗಳಲ್ಲಿ ಒಂದೊಂದರ ಅನುಪಸ್ಥಿತಿಯೂ ಒಟ್ಟಾರೆ ನಾಟಕದ ಸಾವಯವ ಶಿಲ್ಪದ ವೈಫಲ್ಯಕ್ಕೆ ಕಾರಣವಾಗುತ್ತದೆ. ಈ ಎಲ್ಲವನ್ನು ಶ್ರದ್ಧೆಯಿಂದ ಗಮನಿಸಿ, ವಿನ್ಯಾಸಗೊಳಿಸಿದ ಪ್ರಯತ್ನವಾಗಿ ಡಾ. ಮಂಜುನಾಥ್ ಅವರ ನಾಟಕ, ''ಬಿಸಿಲ್ಗು ದುರೆ'' ಯು ಪ್ರಸ್ತುತ ವೆನಿಸುತ್ತದೆ.





ಸಾಂಪ್ರದಾಯಿಕವಾದ ಸ್ತ್ರೀ ಪ್ರತಿಮೆಯನ್ನು ಬೇರೆ ಬೇರೆ ಮಗ್ಗುಲುಗಳಿಂದ ನೋಡಿದ, ಹೊಸ ಸಾಧ್ಯತೆಗಳಿಗೆ ಅಭಿವ್ಯಕ್ತಿಗಳನ್ನು ನೀಡಿದ ಸಾಹಿತಿಗಳಲ್ಲಿ, ತ್ರಿವೇಣಿ ಯವರಿಗೆ ವಿಶಿಷ್ಟ ಸ್ಥಾನವು ದೊರೆಯುತ್ತದೆ. ಅವರ 'ಅಪಸ್ವರ' ಮತ್ತು 'ಅಪಜಯ'ಗಳು ಆ ನೆಲೆಯ ಎರಡು ಮಹತ್ವದ ಕಾದಂಬರಿಗಳಾಗಿವೆ. ಈ 'ಬಿಸಿಲ್ಗುದುರೆ' ನಾಟಕವು ಆ ಕಾದಂಬರಿಗಳ ಆಶಯವನ್ನೇ ವಸ್ತುವಾಗಿ ಸ್ವೀಕರಿಸಿದೆ.

ಮರೀಚಿಕೆ, ಗಾಳಿಗೋಪುರ, ಅಂಗೈಯಲ್ಲಿ ಅರಮನೆ ಮುಂತಾದ ಅನೇಕ ಪರಿಕಲ್ಪನೆಗಳಿಗೆ ಪರ್ಯಾಯವಾಗಿ ಸಲ್ಲುವ ಬಿಸಿಲ ಕುದುರೆಗೆ, ತನ್ನ ಬೆಂಬತ್ತಿದವರನ್ನು ಸದಾ ಓಡಿಸುತ್ತಿರುವುದೇ ಪ್ರವೃತ್ತಿಯಾಗಿದೆ. ಸಿಕ್ಕೂ ಸಿಗದಂತೆ ಆಟವಾಡಿಸುವುದೇ ನೇಮವಾಗಿದೆ. ಇದು, ಒಳಗೆ ಇರದ ಸುಖವನ್ನು ಹೊರಗೆ ಹುಡುಕುವ ಹುಂಬತನಕ್ಕೆ ಸಂವಾದಿಯೂ ಹೌದು. ''ಸಂತೃಪ್ತಿಯೆನ್ನುವುದು ಒಂದು ಸ್ಥಿತಿಯಲ್ಲ, ಬದಲಿಗೆ ಒಂದು ಮನೋವೃತ್ತಿ'' ಎನ್ನುವ ಸಂದೇಶವನ್ನು ಕೇಂದ್ರವಾಗಿಟ್ಟುಕೊಂಡಿರುವ ಈ ನಾಟಕದ ಸಾಹಿತ್ಯಿಕ ನಿಲುವನ್ನು ಪರಿಚಯ ಮಾಡಿಕೊಡುವುದು ಮಾತ್ರವೇ ಈ ಕಿರು ಬರಹದ ಉದ್ದೇಶವಾಗಿದೆ.

ಕಥಾ ಹಂದರ, ಪಾತ್ರನಿರ್ಮಿತಿ, ಸನ್ನಿವೇಶ ಸಂರಚನೆ ಮುಂತಾದ ವಿಚಾರಗಳಲ್ಲಿ ನಾಟಕವು ಮೂಲಕ್ಕೆ ವಿಧೇಯವಾಗಿದೆ. ತ್ರಿವೇಣಿಯವರು ತಿಳಿಯಾದ, ಸರಳವಾದ ನಿರೂಪಣೆಯ ದಡಗಳಲ್ಲೇ ಹುದುಗಾಡುವ ಮಾನವ ಸ್ವಭಾವದ ಸಂಕೀರ್ಣತೆಗಳು ಹಾಗೂ ಬುದ್ಧಿ ಭಾವಗಳೆರಡನ್ನೂ ದುಡಿಮೆಗೆ ಹಚ್ಚುವ ಕ್ರಮಗಳನ್ನು ಮಂಜುನಾಥ್ ಅವರು ಯಥೋಚಿತವಾಗಿ ಬಳಸಿ ಕೊಂಡಿದ್ದಾರೆ. ಸತತವಾಗಿ ಕ್ರಿಯಾಪೇಕ್ಷಿಗಳಾಗುವ ಪಾತ್ರಗಳನ್ನೇ ಆರಿಸಿಕೊಂಡು, ಕೃತಿಯ ನಾಟಕೀಯತೆಯನ್ನು ಕಾಯ್ದುಕೊಂಡಿದ್ದಾರೆ. ಹೀಗಾಗಿ, ಈ ನಾಟಕದ ಸಾಹಿತ್ಯಿಕ ಮೌಲ್ಯ ನಿಷ್ಕರ್ಷೆಯು ಒಂದರ್ಥದಲ್ಲಿ ತ್ರಿವೇಣಿಯವರ ಕೃತಿಗಳ ಮರು ಓದೇ ಆಗುತ್ತದೆ.

ಮೇಲ್ನೋಟಕ್ಕೆ, 'ಬಿಸಿಲ್ಗುದುರೆ'ಯ ಕಥೆಯು ಒಂದೇ ಆಯಾಮದಲ್ಲಿ ಬೆಳೆಯುತ್ತ ಹೋಗುವ ಅಭ್ಯಾಸವನ್ನು ಸೃಷ್ಟಿಸುತ್ತದೆ. ಚುರುಕು ಬುದ್ಧಿಯ ನಗರದ ಹುಡುಗಿ ಮೀರ, ತಾಯ್ತಂದೆಯರಿಲ್ಲದ ಅನಾಥ ಮಗು. ದೊಡ್ಡಪ್ಪ-ದೊಡ್ಡಮ್ಮಂದಿರ ಆಸರೆಯಲ್ಲಿ ಸುಖವಾಗಿಯೇ ಇದ್ದ ಎಳೆಯ ಜೀವ. ಅವರ ಆಣತಿಯನ್ನು ಮೀರುವ ಧೈರ್ಯವಾಗಲಿ, ಸ್ವಂತಕ್ಕೆ ಬೇಕಾದಂತೆ ಬದುಕುವ ಅವಕಾಶವಾಗಲಿ ಅವಳಿಗಿರುವುದಿಲ್ಲ. ಆ ಒತ್ತಡಗಳಿಗೆ ಮಣಿದು ಅವಳು ಮದುವೆಯಾಗುವ ಶಾಮು, ಹಳ್ಳಿಯ ಹೈದ. ಸಗಣಿ ಮೆತ್ತಿದ ಮುಖದಲ್ಲಿ ಚೆಲುವು ತುಂಬಿ ಹೊರಳುವ ಕಣ್ಣುಗಳು, ಕೆಸರು ತುಂಬಿದ ಗದ್ದೆಯ ಬದುವಿನ ತಂಪು, ಅಡುಗೆಯ ವೆಂಕಮ್ಮನ ನಿರ್ವ್ಯಾಜ ಮಮತೆಯ ಗಂಧ ಗಳೆಲ್ಲ ಅವನ ಪಾಲಿಗೆ ಸೊಗಸಿನ ಮಡುಗಳು. ಮೀರಳಿಗೆ ಈ ಹಳ್ಳಿಯ ಸ್ವರೂಪವೇ ಅನಾಕರ್ಷಕ. ಶಾಮುವಿನ ತರಂಗಾಂತರಗಳೇ ಬೇರೆ. ಅವಳವೇ ಬೇರೆ. ಅವರಿಗೆ ಹುಟ್ಟುವ ಒಂದೇ ಮಗುವೂ ಮಣ್ಣಿಗೆ ಮರಳುವ ನೋವಿಗೂ ಈ ಹಳ್ಳಿಯೇ ಸಾಕ್ಷಿಯಾಗಿ ನಿಲ್ಲುತ್ತದೆ. ದೈಹಿಕ ದೌರ್ಬಲ್ಯದಿಂದಾಗಿ, ಮುಂದೆಂದೂ ತಾಯಿಯಾಗಲಾರದ ಸ್ಥಿತಿಯಲ್ಲಿ, ಮೀರಳಿಗೆ ಹಿಂದೆಂದೋ ಕಂಡು, ಮರವೆಗೆ ಸಂದಿದ್ದ, ವೈದ್ಯಳಾಗುವ ಕನಸಿಗೆ ಆಹಾರಕೊಡಬೇಕೆನ್ನುವ ಸ್ವಪ್ನ... ಶಾಮುವಿಗೆ ಅವಳನ್ನು ತಡೆಯಲಾರದ ಅಸಹಾಯಕತೆ. ಇಬ್ಬರೂ ಪರಸ್ಪರರನ್ನು ಸುಖವಾಗಿಡಬೇಕೆನ್ನುವ ಹಂಬಲದ ಹಿಂಬಾಲಕರೇ ಆಗುತ್ತಾರೆ. ಆ ಸುಖವೋ, ದಿಗಂತದಂಚಿನಲ್ಲಿ ಸುಳಿಯುತ್ತ, ಕೈ ಮಾಡುತ್ತಾ, ದಾಪುಗಾಲಿಡುತ್ತಾ ಇಂದು - ನಾಳೆಗಳನ್ನು ಜೋಡಿಸುತ್ತಾ ಓಡುತ್ತಲೇ ಇದೆ. ಶಾಮುವಿಗೆ ಮರುಮದುವೆ ಮಾಡಿಸಿದರಾದರೂ ಈ 'ಕುದುರೆ' ವಿಶ್ರಾಂತ ವಾಗಬಹುದೇನೋ ಎನ್ನುವ ದೂರದ ಆಸೆ, ಮೀರಾಳನ್ನು ಮತ್ತೆ ಓಟಕ್ಕೆ ಹಚ್ಚುತ್ತದೆ. ಮೀರಾ ವೈದ್ಯಳಾಗುತ್ತಾಳೆ, ಶಾಮುವಿಗೆ ನೀಡಿದ

ಆಶ್ವಾಸನೆಯಂತೆ ಹಳ್ಳಿಗೆ ಮರಳುತ್ತಾಳೆ. ಅಲ್ಲಿ, ಬದುಕನ್ನು ಚಿಗುರಿಸುವ ಹುಮ್ಮಸ್ಸು ಹೊತ್ತು ತರುತ್ತಾಳೆ. ಆದರೆ, ಶಾಮು ಮತ್ತು ಅವನ ಎರಡನೆಯ ಹೆಂಡತಿ ಸರಸಿಯರ ದಾಂಪತ್ಯದಲ್ಲಿ, ಆಗಂತುಕಳಾಗಿಯೇ ಉಳಿಯುವ ಅವಳ ಖಾಲಿತನ, ಮತ್ತೆ ನಗರಕ್ಕೆ ಹೋದರಾದರೂ ಶಾಂತಿಯ ಸೌಖ್ಯ ಸಿಗಬಹುದೇ, ಶೂನ್ಯದ ಹಿಂದಿನ ಅಂಕೆಯೊಂದು ಅಸ್ತಿತ್ವಕ್ಕೆ ಬರಬಹುದೇ ಎನ್ನುವ ಕುದುರೆಯ ಕಿರೆ... ವಾಸ್ತವವಾಗಿ, ಇದು ಒಂದು ಪಥವಲ್ಲ, ಹೊರಟಲ್ಲಿಗೇ ಮರಳಬೇಕಾದ ಅನಿವಾರ್ಯತೆಯಿರುವ ವರ್ತುಲ ಎನ್ನುವ ಸತ್ಯದೆಡೆಗೆ ಮುಖಮಾಡುತ್ತ, ಬದುಕಿನ ಚಮತ್ಕಾರಗಳ ಸಮ್ಮುಖದಲ್ಲಿ ಬಯಲಾಗುತ್ತ ಆಗುತ್ತ ಈ ನಾಟಕವು ಮುಗಿಯುತ್ತದೆ.

ಈ ನಾಟಕಕ್ಕೆ ಎರಡು ಪ್ರಮುಖ ಕೇಂದ್ರಗಳಿವೆ. ಮೀರ ಮತ್ತು ಶಾಮು ಇವರ ವ್ಯಕ್ತಿತ್ವಗಳು ವಿಶಿಷ್ಟ ಪಾತಳಿಗಳಲ್ಲಿ, ಈ ಪಾತ್ರಗಳನ್ನು ನಿರ್ವಹಿಸುತ್ತವೆ. ಈ ಒಂದೊಂದು ಕೇಂದ್ರದಲ್ಲಿ ನಿಂತಾಗಲೂ ಆಚೆ ಬದಿಯ ತಪ್ಪುಗಳು ಪ್ರಧಾನವಾಗಿ, ಅಕ್ಷಮ್ಯವಾಗಿ ಕಾಣಿಸುತ್ತವೆ. ಮೀರಳ ದೃಷ್ಟಿಯಲ್ಲಿ, ಇಡಿಯ ವ್ಯವಸ್ಥೆಯೇ ದೋಷಪೂರ್ಣವಾಗಿದೆ. ತನಗೆ ಒಗ್ಗದ ಬದುಕನ್ನು ದೂಡಬೇಕಾದ ದೈನ್ಯದ ಅರ್ಥಕ್ಕಾಗಿ ಅವಳು ತಡಕಾಡುತ್ತಾಳೆ. ಇದಕ್ಕೆ, ಅವಳು ನಿರಾಕರಿಸಿದಾಗಲೂ ಅವಳ ಮೇಲೆ ದೈಹಿಕ ಅತ್ಯಾಚಾರ ನಡೆಸುವ ಶಾಮು, ಒಂದು 'ಸ್ಥಾವರ ಸಂಕೇತ'ವಾಗಿ ನಿಲ್ಲುತ್ತಾನೆ ಎಂದರೆ, ಈ ವ್ಯವಸ್ಥೆಗೆ ಒಡಂಬಡುವ ಬದುಕಿನ ಶ್ರುತಿಯದೆಯಲ್ಲ, ಅದು ಏಕತಾನವೇ ಇರಲಿ, ವೈವಿಧ್ಯ ಲಯಗತಿಗಳಿಗೇ ಒಲಿದಿರಲಿ ಅದನ್ನು ಬದಲಾಯಿಸುತ್ತೇನೆನ್ನುವುದು ಕೇವಲ ಭ್ರಮೆ. ಅದನ್ನು ಅನುಸರಿಸುವುದೇ ಹಿತಕರ ಎನ್ನುವ ವ್ಯಂಗ್ಯವು ಇಲ್ಲಿ ಗಾಢವಾಗುತ್ತದೆ.

ಶಾಮುವಿನ ದೃಷ್ಟಿಯಲ್ಲಿ, ಮೀರಾಳಿಗೆ ಇರುವ ಕೊರತೆಗಳೇನು ಎನ್ನುವುದೇ ಸಮಸ್ಯೆಯಾಗುತ್ತದೆ. ತನ್ನ ಮೈ ಮರೆಸುವ ಪ್ರಕೃತಿಯನ್ನು ಅವಳೂ ಇಷ್ಟಪಡಬಾರದೇಕೆ ಎನ್ನುವ ಗೊಂದಲ. ಆದರೆ ಅವನಲ್ಲಿ ಛಲವಿಲ್ಲ. ಬೇಕಾದಂತೆ ಮಾಡಿಕೊಂಡಾದರೂ ಅವಳು ಸುಖಿಯಾಗಿರಲೆಂಬ ಹತಾಶೆಯ, ಶರಣಾಗತಿಯು ಅವನಲ್ಲಿದೆ. ಮೀರಾ ಬೇಕು, ಅವಳ ಬೇಕುಗಳು ಒತ್ತಟ್ಟಿಗಿರಲಿ ಎನ್ನುವ ಗುಪ್ತ ವ್ಯಕ್ತ ಬಯಕೆಗಳ ಹಿಂದೆಯೇ ಅವನ ಚಾರಣವು ನಡೆಯುತ್ತಿರುತ್ತದೆ.

ಇವರಿಬ್ಬರೂ ಪರಸ್ಪರ ಪ್ರೀತಿಸುತ್ತಾರೆ. ಸೋತು ಗೆಲ್ಲುವ ಸೂಕ್ಷ್ಮಗಳನ್ನೂ ಅಭ್ಯಸಿಸುತ್ತಾರೆ. ತಮ್ಮೊಳಗೆ ಆಳವಾಗಿ ನೆಲೆಯೂರಿದ ತಪ್ಪಿತಸ್ಥ ಭಾವದಿಂದ ಬಿಡುಗಡೆಪಡೆಯಲು, ಗಾಳಿಯೊಂದಿಗೆ ಗುದ್ದಾಡಲು ಅನುವಾಗುತ್ತಾರೆ. ಈ ಪ್ರೀತಿಯ ಭಿನ್ನ ಪ್ರವಾಹಗಳೂ ಒಂದರೊಳಗೊಂದು ಸೇರಿಹೋಗ ಬೇಕೆನ್ನುವ, ಸುಗಮೋತ್ಸುಕವಾದವುಗಳೇ ಅವರನ್ನು ಬೆಸೆಯ ಬಹುದಾದ ಕೆಲವು ಕೊಂಡಿಗಳು ಅನಿಮಿತ್ತವಾಗಿ ಕಳಚಿ ಬೀಳುವ ಸಂದರ್ಭಗಳು, ಈ ವೈರುಧ್ಯಗಳನ್ನು ಮತ್ತಷ್ಟು ತೀವ್ರಗೊಳಿಸುತ್ತವೆ. ಮುದ್ದಾದ ಕರುವನ್ನು ಅನವಧಾನದಿಂದ ಕೆಳಗೆ ಕೆಡವಿಬಿಡುವ ಮೀರಾಳ ನಡೆವಳಿಕೆ, ಮಗು ವೀಣಾ ಅಥವಾ ಜಾನಕಿಯ ಅಕಾಲಿಕ ಮರಣ, ವಿಕಾಸಸನ್ನದ್ಧವಾಗದ ಆಕುಂಚನವೇ ಶೀಲವಾಗಿದ್ದ ಸರಸಿಯ ಮನೋಭೂಮಿಕೆಗಳೆಲ್ಲವೂ ಈ 'ವಿರತಿ'ಗೆ ಕಾರಣಗಳಾಗುತ್ತವೆ. ಇಲ್ಲಿ, 'ಅದ್ವೈತ' ಮತ್ತು 'ಹೊಂದಾಣಿಕೆ'ಯ ಉಪಕ್ರಮಗಳನ್ನು ಆಯಾ ಸ್ಥಾನಗಳಲ್ಲಿಡಲಾರದ 'ಉಭಯ ದೌರ್ಬಲ್ಯ'ಗಳ ಕೈ ಮೇಲಾಗುತ್ತಿರುವುದೂ ಅಷ್ಟೇ ಸ್ಪಷ್ಟವಾಗುತ್ತದೆ. ಒಂದೆಡೆಯಿಂದ, ಈ ದೌರ್ಬಲ್ಯಗಳು ಮೀರಾ ಹಾಗೂ ಶಾಮು ಇಬ್ಬರನ್ನು ಒಳಗೊಳಗೇ ಕೊರೆಯುತ್ತಿರುತ್ತವೆ; ಇನ್ನೊಂದೆಡೆಯಿಂದ, ಈ ಎರಡೂ ಅಂಶಗಳು ಯುಕ್ತವಾದ ಪೋಷಕಾಂಶಗಳ ಅಭಾವದಿಂದ, ಎಲ್ಲ ಪಾತ್ರಗಳ ಒಳಗೂ ಸೊರಗುತ್ತಿರುತ್ತವೆ. ಇಷ್ಟಿಷ್ಟಾಗಿ ಸತ್ವವನ್ನು ಕಳೆದುಕೊಳ್ಳುತ್ತಿರುತ್ತವೆ.

ಈ ನಾಟಕದಲ್ಲಿ, ಮಂಜುನಾಥ್ ಅವರು ಪಾತ್ರಗಳ ಆಂತರಿಕ ಸಂಘರ್ಷಗಳ ನೆಲೆಗಳನ್ನು ತುಂಬ ಸಂವೇದನಾಶೀಲರಾಗಿ - ಆದರೆ ಸಂಯಮದಿಂದ ಶೋಧಿಸಿದ್ದಾರೆ. ಇದರೊಳಗೆ ಎಡೆಪಡೆಯುವ ಪ್ರಮುಖ ಪಾತ್ರಗಳ ಅಹಂಕಾರಗಳು ಮುರುಟುವ, ಸೋತು ನೆಲಕಚ್ಚುವ ಅಥವಾ ಅನೇಕ ಚೂರುಗಳಾಗಿ ಒಡೆದುಕೊಳ್ಳುವ ಕ್ರಮಗಳ ನಿರ್ವಹಣೆಯು ಈ ಮಾತಿಗೆ ಒಳ್ಳೆಯ ಉದಾಹರಣೆಯಾಗುತ್ತದೆ. ಶಾಮುವಿನಲ್ಲಿ ವಿಜೃಂಭಿಸುವ ಪುರುಷ ಅಹಂಕಾರ, ಉಂಡುಡಲು ಸಾಕಷ್ಟಿರುವುದೇ ತೃಪ್ತಿಯ ನಿರ್ವಚನವೆನ್ನುವ ಪ್ರಜ್ಞೆಯ ಸೀಮೆಗಳು, ತನ್ನ ವೃತ್ತದಿಂದಾಚೆಗೊಂದು ಪ್ರಪಂಚವಿದೆಯೇನೋ ಎನ್ನುವ ಕುತೂಹಲವೂ ಇರದ ಸ್ವಯಂ ಮಗ್ನತೆಗಳೆಲ್ಲ ಮೀರಾ, ತನ್ನ ಮೃದು-ಗಟ್ಟಿತನಗಳಿಂದಲೇ ಸವಾಲಾಗುತ್ತಾಳೆ. ತಾನು ಎಚ್ಚರಿಕೆಯಿಂದ ಕಾವು ಕೊಡುತ್ತಿರುವುದು ಖಾಲಿ ಕವಚಕ್ಕೆ ಎನ್ನುವ ಅರಿವಿನ ನೋವನ್ನು ಅವನು ಸ್ವೀಕರಿಸುವ ಬಗೆಯು ಮಾರ್ಮಿಕವಾಗುವುದು ಈ ಹಿನ್ನೆಲೆಯಲ್ಲಿಯೇ ನಾಟಕದ ಇನ್ನೊಂದು ಮಗ್ಗುಲು, ಸರಸಿಯ ಜೈವಿಕ ಮಟ್ಟವನ್ನು ಮೀರದ ಅಹಂಕಾರದೊಂದಿಗೆ ಸೆಣಸಾಡುವುದರಲ್ಲಿ ಮಗ್ನವಾಗುತ್ತದೆ. ತಾಯ್ತನವನ್ನು ಸಾಧನೆಯೊಂದಿಗೆ ಸಮೀಕರಿಸಿಕೊಳ್ಳುವ ಆ ಪಾತ್ರವು, ತನ್ನ ಅಸ್ಥಿರತ್ವವನ್ನು, ಆ ಮಹತ್ವವನ್ನು ಕಂಡುಕೊಳ್ಳುವ ರೀತಿಯೂ ಸಾಂಕೇತಿಕವೇ ಆಗಿದೆ.

ಹೀಗೆ, ಈ ಎಲ್ಲ ಪಾತ್ರಗಳಿಗೂ, ''ತಾನು ಬಯಸಿದುದು ಇದಲ್ಲ, ತನಗೆ ಬೇಕಾದುದು ಸಿಗಲೇ ಇಲ್ಲ'' ಎನ್ನುವ ಅನಿಸಿಕೆಯು ಶಾಶ್ವತವಾಗುತ್ತದೆ. ಇದು, ಬದುಕಿನ ಬಗೆಗಿನ ನಿರ್ಲಿಪ್ತಿಯೂ ಆಗಲಾರದ, ಬಾಂಧವ್ಯದ ರೇಖೆಯೂ ಆಗಲಾರದ ಉಭಯ ಭ್ರಷ್ಟ ಸ್ಥಿತಿಯು ನಾಟಕದ ವ್ಯಾಪ್ತಿಯಿಂದಾಚೆಗೂ ಕಾಡುತ್ತದೆ. ಸ್ಪಂದನ ಕಾತರವಾದ ಮನಸ್ಸುಗಳಲ್ಲಿ ಬದುಕಿನ ಬಗೆಗಿನ ಯೋಚನೆಗಳಿಗೆ ಚಾಲನೆಯನ್ನು ನೀಡುತ್ತದೆ.

ಈ ನಾಟಕಕಾರರ ಹೆಚ್ಚುಗಾರಿಕೆಗೆ ನಿದರ್ಶನಗಳಾಗುವ ಒಂದೆರಡು ವಿಚಾರಗಳನ್ನು ಇಲ್ಲಿ ಅಗತ್ಯವಾಗಿ ಪ್ರಸ್ತಾಪಿಸಬೇಕು. ಚುರುಕಾದ ಸಂಭಾಷಣೆಗಳ ಮೂಲಕ ಪಾತ್ರಗಳ ಅಂತರ್ದರ್ಶನ ಮಾಡಿಸುವ ಚಾಕಚಕ್ಯತೆ, ಕಿರುಮಾತುಗಳ ಮೂಲಕ ಧ್ವನಿಶಕ್ತಿಗೆ, ಸಂಕೇತಗಳಿಗೆ ಅವರು ನೀಡುವ ಮಾನ್ಯತೆಗಳು ಹಿತವೆನಿಸುತ್ತವೆ. ಪುಟ್ಟ ವೆಂಕು, ಅಡುಗೆಯ ವೆಂಕಮ್ಮ ರಂಥ ಪಾತ್ರಗಳ ಸಹಾಯದಿಂದ, ಮೀರಾ - ಶಾಮು ಅವರ ಧೋರಣೆಗಳನ್ನು ಪ್ರಶ್ನಿಸುವ ಅರ್ಥ ಮಾಡಿಸುವ, ಬದಲಾಯಿಸುವ ಪ್ರಯತ್ನಗಳು ಈ ಕೃತಿಯ ಇನ್ನೊಂದು ಧನಾತ್ಮಕ ಅಂಶವನ್ನು ಸೂಚಿಸುತ್ತವೆ. ವೈರುಧ್ಯಗಳನ್ನು ಸಾಲಿಗೆ ಜೋಡಿಸುತ್ತಾ ಸಾಮ್ಯಗಳನ್ನು ಗುರುತಿಸುವ ವಿನೂತನ *(ಪುಟ 9ಕ್ಕೆ)*

**FOR ALL YOUR DOMESTIC AND INTERNATIONAL TRAVEL ARRANGEMENTS**

*CONTACT*

**AUGUST TRAVEL SERVICE**

**Agents For INDIAN AIRLINES & JET AIRLINES**

REGD. OFFICE :
3/15, ASHIANA, SECTOR 17,
VASHI, NAVI MUMBAI
PHONES : 789 1970 * 789 1972
789 2451
GRAMS : AUGTRASERV

ALSO AT :
2/16, KABBUR HOUSE,
SION (E), MUMBAI-400 022.
PHONES : 407 2984 * 409 3573
407 7750

# ಭಾರತೀಯ ಕಲೆ

ಭಾಗ - 10

ಭಾರತದಲ್ಲಿ ಚಿತ್ರಕಲೆ ಹಾಗೂ ಶಿಲ್ಪಕಲೆಗಳು ಬಹಳ ಪ್ರಾಚೀನ ಕಾಲದಿಂದಲೂ ಬೆಳೆದು ಬಂದಿವೆ. ವಿವಿಧ ಪ್ರಾಂತಗಳಲ್ಲಿ ವಿವಿಧ ಶೈಲಿಗಳು ಬೆಳೆದು ಬಂದಿವೆ. ಓದುಗರಿಗೆ ಭಾರತೀಯ ಕಲೆಯ ಒಂದು ದರ್ಶನವನ್ನು ನೀಡಲು ನಾವು ಶ್ರೀ ಎನ್. ಮರಿಶಾಮಾಚಾರ್ ಅವರು ಬರೆದಿರುವ ಭಾರತೀಯ ಕಲೆ ಎಂಬ ಪುಸ್ತಕದಿಂದ ಆಯ್ದ ಭಾಗಗಳನ್ನು ನೇಸರುವಿನಲ್ಲಿ ಪ್ರಕಟಿಸುತ್ತಿದ್ದೇವೆ. ಸ್ವತಃ ಕಲಾವಿದ, ಶಿಲ್ಪಿ, ಛಾಯಾಗ್ರಾಹಕರಾಗಿರುವ ಮರಿ ಶಾಮಾಚಾರ್‌ರು ಕಲೆಯ ಕ್ಷೇತ್ರದಲ್ಲಿ ಬಹುಮುಖ ಸೇವೆಯನ್ನುಸಲ್ಲಿಸಿದ್ದಾರೆ ಮತ್ತು ಕಲಾಚಟುವಟಿಕೆಗಳಿಗೆ ಸ್ಫೂರ್ತಿ ತಂದಿದ್ದಾರೆ.

## ಪ್ರಥಮ ಚಿತ್ರಾಚಾರ್ಯ-ವರ್ಧಕಿ

'ಮಾನಸಾರ'ದ ಉಲ್ಲೇಖದ ಅನುಸಾರ ಮಹಾ ವಿಶ್ವಕರ್ಮ (ಬ್ರಹ್ಮ)ನ ನಾಲ್ಕು ಮುಖಗಳಿಂದ ವಿಶ್ವಕರ್ಮ, ಮಯ, ತ್ವಷ್ಟ್ರ ಮತ್ತು ಮನು ಹುಟ್ಟಿದರು. ವಿಶ್ವಕರ್ಮನು ಇಂದ್ರ ಪುತ್ರಿಯೊಂದಿಗೆ ವಿವಾಹವಾದನು. ಅವರಿಂದ ಜನಿಸಿದವನೇ 'ಸ್ಥಪತಿ' ಎಂದು ಹೇಳಲಾಗಿದೆ. ಇದೇ ಪ್ರಕಾರ ಮಯ ಮತ್ತು ಸುರೇಂದ್ರತನಯರ ಸಹೋಯುಗದಿಂದ 'ವರ್ಧಕಿ'ಯು ಮತ್ತು ಮನು ಹಾಗೂ ನಳಕನ್ಯೆ ಇವರಿಂದ 'ತಕ್ಷಕ'ರೂ ಜನಿಸಿದರು.

ಸ್ಥಪತಿಯು ಇವರಲ್ಲಿ ಪ್ರಮುಖನು. ಅವನು ಸಮಸ್ತ ಶಾಸ್ತ್ರಗಳಲ್ಲಿ ಪಾರಂಗತನು. ಅವನ ಸಂರಕ್ಷಣೆಗಾಗಿ ಮಯ ಮುಂತಾದವರು ತಮ್ಮ ತಮ್ಮ ಕಾರ್ಯ ಮಾಡುತ್ತಾರೆ. ಅಳತೆ ನೋಡುವುದು ಮತ್ತು ನಕಾಶೆಯನ್ನು ತಯಾರಿಸುವುದು ಸೂತ್ರಗ್ರಹನ ಕೆಲಸ. ಇವನ ಅಧೀನದಲ್ಲಿ ವರ್ಧಕೀ ಮತ್ತು ತಕ್ಷಕನು ಕೆಲಸ ಮಾಡುತ್ತಾರೆ. ವರ್ಧಕಿಯ ಕಾರ್ಯ ಚಿತ್ರ ಬರೆಯುವುದು ಮತ್ತು ಶಿಕ್ಷಕನ ಕಾರ್ಯ ಕತ್ತರಿಸುವುದು ಮತ್ತು ಜೋಡಿಸುವುದು.

ಆದ್ದರಿಂದ ವಿಶ್ವಕರ್ಮನ ಪರಂಪರೆಯಲ್ಲಿ ಕಲೆಯ ವಿಕಾಸದಲ್ಲಿ ಚಿತ್ರ ವಿದ್ಯೆಯನ್ನು ಋಷಿಸ್ಥಾನೀಯನಾದ ಮಹಾಪುರುಷ ವರ್ಧಕಿಗೆ ಸಮರ್ಪಿಸಲಾಗಿದೆ. ಆಚಾರ್ಯ ವರ್ಧಕಿಯ ಹೆಸರು ಪ್ರಮುಖ ಶಿಲ್ಪಿಗಳ ಜೊತೆಯಲ್ಲಿ ಇದ್ದು ಕಲೆಯ ವಿಷಯಕ್ಕೆ ಸಂಬಂಧಿಸಿದ ಹಸ್ತಲಿಖಿತ ಗ್ರಂಥಗಳಲ್ಲೂ ಇವನ ಹೆಸರು ಕಂಡು ಬರುತ್ತದೆ. ಆದರೆ ಅವನ ಹೆಸರಿನಲ್ಲಿ ಯಾವುದೇ ಒಂದು ಖಚಿತ ರೂಪದ ಗ್ರಂಥವಿಲ್ಲ. ಪ್ರಥಮ ಚಿತ್ರ ಚಾರ್ಯನಾಗಿದರೂ ಕೂಡಾ ಚಿತ್ರ ವಿದ್ಯೆಗೆ ಸಂಬಂಧಿಸಿದ ಅವನ ಯಾವ ಕೃತಿಯೂ ಈ ವರೆಗೂ ದೊರೆತಿಲ್ಲ.

### ಶಿಲ್ಪ ಮತ್ತು ವಾಸ್ತು

ಇವೆರಡೂ ಶಬ್ದಗಳನ್ನೂ ಸಮಾನಾರ್ಥಕವಾಗಿಯೂ ಅಥವಾ ಬಹುಶಃ ಒಂದೇ ಎಂದೂ ತಿಳಿಯಲಾಗಿದೆ. ಆದರೆ ವಾಸ್ತವವಾಗಿ ಇದು ಸತ್ಯವಲ್ಲ. ಶಿಲ್ಪ ಒಂದು ಭಾಗವೇ ವಾಸ್ತು. ಶಿಲ್ಪ ವ್ಯಾಪ್ತಿಯು ಬಹಳ ದೊಡ್ಡದಿದೆ. ಶಿಲ್ಪದಲ್ಲಿ ಹತ್ತು ಭಾಗಗಳನ್ನು ಮಾಡಲಾಗಿದೆ. ಅವು ಯಾವುದೆಂದರೆ 1) ಕೃಷಿ, 2) ನೀರು, 3) ಮಸೀದೆ (ಗಣಿ), 4) ನೌಕೆ, 5) ರಥ, 6) ವಿಮಾನ, 7) ವಾಸ್ತು (ಮನೆ), 8) ಪ್ರಾಕಾರ, 9) ನಗರ ರಚನೆ 10) ಯಂತ್ರ. ಈ ಹತ್ತು ವಿಭಾಗಗಳು ಒಂದೇ ಶಿಲ್ಪ ಶಾಸ್ತ್ರದ ಉಪಶಾಸ್ತ್ರಗಳು. ಇವುಗಳಲ್ಲಿ ವಾಸ್ತು ಶಿಲ್ಪದ ಸ್ಥಾನವೂ ಒಂದು.

ಸಂಸ್ಕೃತದ ಪ್ರಾಚೀನ ಗ್ರಂಥಗಳಲ್ಲಿ 'ಶಿಲ್ಪ' ಶಬ್ದವನ್ನು ಕಲಾ ಕೌಶಲ ಎಂಬ ಅರ್ಥದಲ್ಲಿ ಬಳಸಲಾಗಿದೆ. ಭವನ ನಿರ್ಮಾಣ (ಮನೆ ಕಟ್ಟುವುದು)ದ ಸಂದರ್ಭದಲ್ಲಿ 'ಶಿಲ್ಪ' ಶಬ್ದಕ್ಕೆ ಬದಲಾಗಿ 'ವಾಸ್ತು' ಪದ ಬಳಸಲಾಗುತ್ತದೆ. ಆದರೆ ವಾಸ್ತು ವಿದ್ಯೆಗೆ ಸಂಬಂಧಿಸಿದ ಶಾಸ್ತ್ರದಲ್ಲಿ ಕೇವಲ ಭವನ ನಿರ್ಮಾಣ (ವಾಸ್ತು)ದ ವರ್ಣನೆಯಷ್ಟೇ ಇಲ್ಲ. 'ಮಾನಸಾರ'ದಲ್ಲಿ ಇದನ್ನು ಹರ್ಮ್ಯ (ಭವನ ನಿರ್ಮಾಣ), ಧರಾ (ಭೂ ಪರೀಕ್ಷೆ), ಯಾನ (ರಥ, ಯಂತ್ರ ಮುಂತಾದ ರಚನೆ) ಮತ್ತು ಪರ್ಯಂಕ (ಶಯನಾಗಾರ) ಮುಂತಾದ ಅನೇಕ ವಿಷಯಗಳ ಅರ್ಥದಲ್ಲಿ ಬಳಸಲಾಗಿದೆ. ಆದ್ದರಿಂದ ಎರಡೂ ಶಬ್ದಗಳಲ್ಲಿ ನಭೇದ ಸ್ಪಷ್ಟವಿದೆ.

### ಶಿಲ್ಪಿ ಮತ್ತು ಕಲಾವಿದ

'ಶಿಲ್ಪ'ವು ಅತ್ಯಂತ ಪ್ರಾಚೀನವಾದ ಶಬ್ದ; ಆದರೆ ಅದನ್ನು ಬೇರೆ ಬೇರೆ ಯುಗಗಳಲ್ಲಿ ಬೇರೆ ಬೇರೆಯಾಗಿ ಅರ್ಥೈಸಲಾಗಿದೆ. ಶಿಲ್ಪ ಮತ್ತು ಕಲೆಯ ಪ್ರಾಚೀನತೆಯು ವೈದಿಕ ಯುಗದಷ್ಟು ಹಳೆಯದು. ವೈದಿಕ ಯುಗದ ಈ ಶಿಲ್ಪಕಲಾ ವಿಧಾನವು ಈ ಭೂಮಿಯ ಮೇಲೆ ಅಸ್ತಿತ್ವದಲ್ಲಿತ್ತು. ಆದರೆ ಅನಂತರ ಬೇರೆ ವಿಷಯಗಳಂತೆಯೇ ಅದನ್ನು ಧರ್ಮ, ಆಧ್ಯಾತ್ಮ ಮತ್ತು ಶಾಸ್ತ್ರಗಳ ಬಂಧನದಲ್ಲಿ ಸಿಲುಕಿಸಿ, ಅದರ ಪ್ರಗತಿಯಲ್ಲಿ ತಡೆಯುಂಟು ಮಾಡಲಾಯಿತು. ವೈದಿಕ ಯುಗದ ನಂತರ ಬ್ರಾಹ್ಮಣ ಯುಗದಲ್ಲಿ ಶಿಲ್ಪ ಶಬ್ದವನ್ನು ನೃತ್ಯ, ಗೀತೆ ಮತ್ತು ವಾದ್ಯದ ಅರ್ಥದಲ್ಲಿ ಬಳಸಲಾಗುತ್ತಿತ್ತು. ಹೇಗೆಂದರೆ-'ತ್ರಿವಿಧೋ ಶಿಲ್ಪಂ, ನೃತ್ಯಂ- ಗೀತಂ-ವಾದಿತ್ರಮಿತಿ' ಕೌಷೀತಕಿ. ಈ ನೃತ್ಯ, ಗೀತೆ ಮತ್ತು ವಾದ್ಯಗಳನ್ನು ಲಲಿತ ಕಲೆಗಳೆಂದು ಪರಿಗಣಿಸಲಾಯಿತು. 'ರಾಮಾಯಣ'ದಲ್ಲಿ ಶಿಲ್ಪ ಮತ್ತು ಕಲೆ ಈ ಎರಡೂ ಶಬ್ದಗಳನ್ನು ವಿಭಿನ್ನ ಅರ್ಥಗಳಲ್ಲಿ ಉಪಯೋಗಿಸಲಾಗಿದೆ.

ಈ ಯುಗದ ಶಿಲ್ಪಿಗಳ ಪ್ರಮುಖ ಕಾಯಕವೆಂದರೆ ಯಜ್ಞ ವೇದಿಕೆಗಳನ್ನು ನಿರ್ಮಿಸುವುದು ಮತ್ತು ಮಾರ್ಗಗಳನ್ನು ರಚಿಸುವುದು. ಈ ರೀತಿಯಲ್ಲಿ ಶಿಲ್ಪಿಗಳ ವರ್ಗ ಎಂದು ಕರೆಯಲಾಯಿತು. ಅನಂತರ ಶಿಲ್ಪಿ ಎಂಬುದರಡಿಯಲ್ಲಿ-ಸ್ಥಪತಿ (ಭವನ ನಿರ್ಮಿಸುವವ), ಸೂತ್ರಗ್ರಾಹಿ (ಬಡಿಗ), ತಕ್ಷಕ (ಮೂರ್ತಿಕಾರ) ಮತ್ತು ಮೃಣಮರ್ಮಜ್ಞ (ಕುಂಬಾರ) ಮುಂತಾದವರನ್ನು ಪರಿಗಣಿಸಲಾಯಿತು. ಬ್ರಹ್ಮ ವೈವರ್ತ್ಯಪುರಾಣದಲ್ಲಿ ವಿಶ್ವಕರ್ಮನ ಒಂಬತ್ತು ಜನ ಪುತ್ರರನ್ನು 'ಶಿಲ್ಪ ಕಾರಿಣ' (ಶಿಲ್ಪಕಾರರು) ಎಂಬ ಹೆಸರಿನಿಂದ ಕರೆಯಲಾಗಿದ್ದು ಅವರ ಹೆಸರುಗಳು ಹೀಗಿವೆ 1) ಮಾಲಕಾರ (ತೋಟಗ), 2) ಕರ್ಮಕಾರ (ಕಮ್ಮಾರ), 3) ಶಂಖಕಾರ (ಶಂಖದ ಮೇಲೆ ಬರೆಯುವವ), 4) ಕುವಿಂದಕ (ನೇಕಾರ), 5) ಕುಂಭಕಾರ (ಕುಂಬಾರ), 6) ಕಾಂಸಕಾರ (ಕಂಚುಕಾರ), 7) ಸೂತ್ರಧಾರ (ಬಡಗಿ), 8) ಚಿತ್ರಕಾರ ಮತ್ತು ಸ್ವರ್ಣಕಾರ (ಅಕ್ಕಸಾಲಿಗ) 'ಅಗ್ನಿ ಪುರಾಣ'ದಲ್ಲಿ ಒಂದು ಸಹಸ್ರ ಶಿಲ್ಪಗಳನ್ನು ಸೂಚಿಸಲಾಗಿದ್ದು ಅವುಗಳನ್ನು ಜೀವನೋಪಾಯದ ಮಾಧ್ಯಮ ಎಂದು ಹೇಳಲಾಗಿದೆ. ಈ ಪುರಾಣ ಗಂಥಗಳಲ್ಲಿ ಚಿತ್ರಕಲೆಯನ್ನು ಶಿಲ್ಪದ್ದೇ ಒಂದು ಅಂಗ ಎಂದು ತಿಳಿದು, ಅದರ ವಿಸ್ತಾರ ಪೂರ್ವಕ ವಿವೇಚನೆಯನ್ನು ಮಾಡಲಾಗಿದೆ. ಇವುಗಳಲ್ಲಿ 'ವಿಷ್ಣು ಧರ್ಮೋತ್ತರ ಪುರಾಣ'ದಲ್ಲಿ ಚಿತ್ರಕಲೆ ಮತ್ತು ಮೂರ್ತಿ ಕಲೆಗೆ ಸ್ವತಂತ್ರ ಸ್ಥಾನವನ್ನು ನೀಡಲಾಗಿದೆ.

ಸಂಸ್ಕೃತದ ಪ್ರಾಚೀನ ಗ್ರಂಥಗಳಲ್ಲಿ 'ಶಿಲ್ಪ' ಶಬ್ದವು ಅನೇಕ ಅರ್ಥಗಳನ್ನು ಪಡೆದಿದೆ. ಇಂದು ಇರುವ ಶಿಲ್ಪ ಪದದ ಅರ್ಥದ ಪರಿಕಲ್ಪನೆಯನ್ನು ಪ್ರಾಚೀನ ಕಾಲದಲ್ಲಿ ಬೇರೆಯೇ ಅರ್ಥದಲ್ಲಿ ಪರಿಗಣಿಸುತ್ತಿದ್ದರು. ಉದಾಹರಣೆಗೆ ಪ್ರಸಿದ್ಧ ವೈಯ್ಯಾಕರಣಿಯಾದ ಪಾಣಿ (ಕ್ರಿ.ಪೂ. 500)ಯ 'ಅಷ್ಟಾಧ್ಯಾಯಿ'ಯಲ್ಲಿ ಶಿಲ್ಪವನ್ನು 'ಚಾರು' (ಲಲಿತ) ಮತ್ತು 'ಕಾ' (ಉದ್ಯೋಗ) ಈ ಎರಡೂ ಅರ್ಥದಲ್ಲಿ ಬಳಸಲಾಗುತ್ತಿತ್ತು. ಆಚಾರ್ಯ ಕೌಟಿಲ್ಯ (ಕ್ರಿ.ಪೂ. 400)ನ 'ಅರ್ಥ ಶಾಸ್ತ್ರ'ದ 'ಧರ್ಮಸ್ಥೀಯ' ಎಂಬ ಅಧಿಕರಣದಲ್ಲಿ 'ಕಾರುಕ' (ಶಿಲ್ಪಿ) ಶಿಲ್ಪಿಗಳ ಹೆಸರನ್ನು ಮತ್ತು ಅವರ ಕಾರ್ಯಗಳ ಸೂಚಿಯೊಂದನ್ನು ಕೊಡಲಾಗಿದೆ.

ಜ್ಯೋತಿಷ್ಯ ಶಾಸ್ತ್ರದ ಆಚಾರ್ಯನಾದ ವರಾಹಮಿಹಿರ (ಕ್ರಿ.ಶ. 500ನೇ)ನ 'ಬೃಹತ್ ಸಂಹಿತೆ'ಯ 53, 54, 57 ಮತ್ತು 59ನೇಯ ಅಧ್ಯಾಯಗಳಲ್ಲಿ ವಾಸ್ತು, ಶಿಲ್ಪ ಮತ್ತು ಕಲೆಯ ಸುಂದರ ವಿವೇಚನೆಯನ್ನು ಮಾಡಲಾಗಿದೆ ಅದರ 'ಪ್ರಾಸಾದ

ಮರಿಶಾಮಾಚಾರ್‌ರವರ 'ಭಾರತೀಯ ಕಲೆ' ಕೃತಿಗೆ ಈ ವರ್ಷದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುರಸ್ಕಾರವು ದೊರೆತಿದೆ. ಈ ಸಂದರ್ಭದಲ್ಲಿ ಮರಿಶಾಮಾಚಾರ್‌ರವರಿಗೆ ಮೈಸೂರು ಅಸೋಸಿಯೇಶನ್ ವತಿಯಿಂದ ಮನಃಪೂರ್ವಕ ಅಭಿನಂದನೆಗಳು

ಲಕ್ಷಣ' ಎಂಬ ಹೆಸರಿನ 56ನೇ ಅಧ್ಯಾಯದಲ್ಲಿ ಇಪ್ಪತ್ತು ಪ್ರಕಾರದ ಪ್ರಾಸಾದಗಳ ವರ್ಣನೆ ಮತ್ತು ದೇವಸ್ಥಾನದ ಭೂಮಿ, ದ್ವಾರ, ಗರ್ಭ ದ್ವಾರ, ಚಿತ್ರಣ, ಪ್ರತಿಮಾ ಪ್ರಮಾಣ ಮತ್ತು ಭೂಮಿಯ ಶ್ರೇಷ್ಠತೆ ಇತ್ಯಾದಿ ವಿಷಯಗಳ ಬಗ್ಗೆಯೂ ವಿವರಣೆ ನೀಡಲಾಗಿದೆ. ಈ ರೀತಿಯಲ್ಲಿ 'ಪ್ರತಿಮಾ ಲಕ್ಷಣ' ಎಂಬ ಹೆಸರಿನ ಅಂತೆಯೇ 58ನೆಯ ಅಧ್ಯಾಯದಲ್ಲಿ ಪಾಷಾಣಕಲೆಯ ಬಗ್ಗೆ ಹೇಳಿದ ವರಾಹ ಮಿಹಿರನ ಅಭಿಪ್ರಾಯವು ಇಂದಿಗೂ ಯೋಗ್ಯವಾಗಿದೆ. ಈ ಗ್ರಂಥದಲ್ಲಿ ವಾಸ್ತು ಶಿಲ್ಪದ ಪುರಾತನ ಏಳು ಜನ ಆಚಾರ್ಯರ ಬಗ್ಗೆಯೂ ಉಲ್ಲೇಖಿಸಲಾಗಿದೆ. ಅವರ ಹೆಸರುಗಳು ಹೀಗಿವೆ -1) ಗರ್ಗ, 2) ಮನು, 3) ವಶಿಷ್ಠ, 4) ಪರಾಶರ, 5) ವಿಶ್ವಕರ್ಮ, 6) ನಗ್ನಜಿತ್, 7) ಮಯ.

ಭೋಜನ ಕಾಲದ ವೇಳೆಗೆ (1010-1055) ಚಿತ್ರಕಲೆಯ ವಿಕಾಸವು ಎಷ್ಟು ಆಗಿತ್ತೆಂದರೆ ಮತ್ತು ಅದರ ಮಹತ್ವ ಎಷ್ಟೊಂದು ಹೆಚ್ಚಿತ್ತೆಂದರೆ ಅದನ್ನು ಶಿಲ್ಪದ ಸೀಮೆಯಿಂದ ಬೇರ್ಪಡಿಸಲೇಬೇಕಾಯಿತು. ಚಿತ್ರಕಲೆಯನ್ನು ಸಮಗ್ರ ಶಿಲ್ಪಗಳಲ್ಲಿ ಪ್ರಮುಖವಾದುದೆಂದೂ ಮತ್ತು ಜನರ ಅನುರಾಗ ವಿನೋದಗಳ ವಿಷಯ ಎಂದೂ ಪರಿಗಣಿಸಲಾಯಿತು.

'ಚಿತ್ರಂ ಹಿ ಸರ್ವ ಶಿಲ್ಪಾನಾಂ ಮುಖಂ ಲೋಕಸ್ಯ ಚ ಪ್ರಿಯಮ್'

### ಸಮರಾಂಗಣ ಸೂತ್ರಧಾರ

### ಶಿಲ್ಪ ಶಾಸ್ತ್ರಕ್ಕೆ ಸಂಬಂಧಿಸಿದ ಪ್ರಾಚೀನ ವಿಷಯ

ಶಿಲ್ಪಶಾಸ್ತ್ರ ವಿಷಯಕ್ಕೆ ಸಂಬಂಧಿಸಿದ ಗ್ರಂಥಗಳ ವಿಷಯವಾಗಿ ಈ ಮೊದಲೇ ವಿವರಿಸಿದ್ದು ಈ ಗ್ರಂಥಗಳ ಸಂಖ್ಯೆಯು ಬಹುಶಃ ಎರಡು ನೂರಕ್ಕಿಂತ ಅಧಿಕವಿದೆ. ಹಳೆಯ ಹಸ್ತಲಿಖಿತ ಗ್ರಂಥ ಸಂಗ್ರಹದಿಂದ ಈ ಗ್ರಂಥಗಳನ್ನು ಬೆಳಕಿಗೆ ತಂದ ವಿದ್ವಾಂಸರಲ್ಲಿ ಮಹಾಮಹೋಪಾಧ್ಯಾಯ ಪಂಡಿತ ಗಣಪತಿ ಶಾಸ್ತ್ರಿಯವರ ಹೆಸರು ಉಲ್ಲೇಖನೀಯ. ಅವರು ಸಂಪಾದಿಸಿದ ಶಿಲ್ಪಶಾಸ್ತ್ರದ ಗ್ರಂಥಗಳ ಹೆಸರು ಹೀಗಿವೆ -1) ವಾಸ್ತು ವಿದ್ಯಾ, 2) ಮಯಮತಮ್, 3) ಮನುಷ್ಯಾಲಯ, 4) ಚಂದ್ರಿಕಾ, 5) ಶಿಲ್ಪರತ್ನಮ್ ಮತ್ತು 5) ಸಮರಾಂಗಣ ಸೂತ್ರಧಾರಮ್. ಪ್ರಾಚೀನ ಪದ್ಧತಿಯಿಂದ ಶಿಲ್ಪಶಾಸ್ತ್ರದ ವಿಧಾನಗಳ ಅನುಸಾರ ಮೂರ್ತಿಗಳನ್ನು ನಿರ್ಮಿಸುವ, ಒಡಿಸಾದ ಶಿಲ್ಪಿಕಾರರ ಹತ್ತಿರ ಇಂದಿಗೂ ಅನೇಕ ಮಹತ್ವಪೂರ್ಣ ಹಸ್ತಲಿಖಿತ ಗ್ರಂಥಗಳು ಇದ್ದು ಈ ಪ್ರಕಾರದ ಗ್ರಂಥಗಳಲ್ಲಿ ಭುವನ ಪ್ರವೇಶ, ಶಿಲ್ಪಸರಾಜಯ ಮತ್ತು ಶಿಲ್ಪಶಾಸ್ತ್ರ ಮುಂತಾದವುಗಳ ಹೆಸರನ್ನು ಹೇಳಬಹುದು.

ಮಹಾಮಹೋಪಾಧ್ಯಾಯ ಪಂಡಿತ ಗೌರಿ ಶಂಕರ ಹರಿಚಂದ ಓಝಾ ಅವರ ಗ್ರಂಥ 'ಮಧ್ಯ ಕಾಲೀನ ಭಾರತೀಯ ಸಂಸ್ಕೃತಿ' (ಪು 107. 1951) ಯಲ್ಲಿ ಈ ಮುಂದಿನ ಅನೇಕ ಶಿಲ್ಪ ವಿಷಯ ಗ್ರಂಥಗಳ ಹೆಸರು ಕೊಡಲಾಗಿದೆ. 1) ವಾಸ್ತುಸೌಖ್ಯ, 2) ಅಪರಾಜಿತ ವಾಸ್ತುಶಾಸ್ತ್ರ, 3) ಪ್ರಾಸಾದಮಕೀರ್ತನ, 4) ಚಿತ್ರಶಾಸ್ತ್ರ, 5) ಚಿತ್ರಪಟ, 6) ಜಲಾರ್ಗಲ, 7) ಪಕ್ಷಿಮನುಷ್ಯಾಲಯಲಕ್ಷಣ, 8) ರಥಲಕ್ಷಣ, 9) ವಿಮಾನವಿದ್ಯಾ, 10) ವಿಮಾನಲಕ್ಷಣ, 11) ವಿಶ್ವಕರ್ಮೀಯ, 12) ಕಾತುಕಲಕ್ಷಣ, 13) ಮೂರ್ತಿಲಕ್ಷಣ, 14) ಪ್ರತಿಮಾದ್ರವ್ಯಾದಿವಚನ, 15) ಸಕಲಾಧಿಕಾರ, 16) ಸಾರಸ್ವತೀಯ ಸಮರಾಂಗಣ ಸೂತ್ರಾಧಾರ, 17) ವಿಶ್ವವಿದ್ಯಾಭರಣ, 18) ವಿಶ್ವಕರ್ಮ ಪ್ರಕಾಶ, 19) ಸಮರಾಂಗಣ ಸೂತ್ರಧಾರ, 20) ಮಯ ಶಿಲ್ಪ ಮತ್ತು 21) ವಿಶ್ವಕರ್ಮೀಯ ಶಿಲ್ಪ ಮುಂತಾದುವುಗಳು.

ಶಿಲ್ಪಶಾಸ್ತ್ರ ಮತ್ತು ವಾಸ್ತುಶಾಸ್ತ್ರಕ್ಕೆ ಸಂಬಂಧಪಟ್ಟ ಗ್ರಂಥಗಳಲ್ಲಿ ಗನ್ನಮಾಚಾರ್ಯನ 'ಮಯಮತಶಿಲ್ಪ ಶಾಸ್ತ್ರ', ಕಶ್ಯಪನ 'ಅಂಶುಮದ್ ಭೇದ', 'ವಿಶ್ವಕರ್ಮೀಯ ಶಿಲ್ಪ (ಅಥವಾ ವಿಶ್ವಕರ್ಮ ಪ್ರಕಾಶ, ವಿಶ್ವಕರ್ಮ ವಾಸ್ತುಶಾಸ್ತ್ರ, ವಿಶ್ವಕರ್ಮೀಯ ಶಿಲ್ಪಶಾಸ್ತ್ರ) ಅಗಸ್ತ್ಯನಿಂದ ರಚಿತವಾದ 'ಅಗಸ್ತ್ಯ ಸಕಲಾಧಿಕಾರ, ಸನತ್ಕುಮಾರ ಕೃತ ಸನತ್ಕುಮಾರ ವಾಸ್ತುಶಾಸ್ತ್ರ' (ಅಥವಾ ವಾಸ್ತುಶಾಸ್ತ್ರ, ಪ್ರಸಾದ ಮಂಡನ ವಾಸ್ತು ಶಾಸ್ತ್ರ) ಇತ್ಯಾದಿ ಗ್ರಂಥಗಳ ಹೆಸರು ಉಲ್ಲೇಖನೀಯ. ಇವೆಲ್ಲವುಗಳಲ್ಲದೆ ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನಸಾರ, ಮಯಮತ, ಕಶ್ಯಪ, ವಿಶ್ವಕರ್ಮ, ಅಗಸ್ತ್ಯ, ಪೌಲಸ್ತ್ಯ, ನಾರದ, ನಾರಾಯಣ, ಮೌಷಲ್ಯ, ಶೇಷಭಾಷ್ಯ, ಚಿತ್ರಸಾರ, ಸಾರಸ್ವತ, ವಿಶ್ವಸಾರ, ಚಿತ್ರಜ್ಞಾನ, ಕಪಿಂಜಲ ಸಂಹಿತಾ, ಕೌಮುದೀ, ಬ್ರಹ್ಮಶಿಲ್ಪ, ಬ್ರಹ್ಮಯಾಮಲ, ದೀಪ್ತಿ ತಂತ್ರ ಮತ್ತು ದೀಪ್ತಿಸಾರ ಮುಂತಾದ 19 ಗ್ರಂಥಕಾರರ ಮತ್ತು ಗ್ರಂಥಗಳ ಅಭಿಪ್ರಾಯಗಳನ್ನು ಉಲ್ಲೇಖಿಸಿರುವ ಒಂದು ಸಂಗ್ರಹ ಗ್ರಂಥವೂ ಇದೆ.

ಡಾ॥ ದ್ವಿಜೇಂದ್ರ ಶುಕ್ಲ ಅವರು ಭೋಜನ 'ಸಮರಾಂಗಣ ಸೂತ್ರಧಾರ'ದ ಬಗೆಗೆ ಸಂಶೋಧನೆ ಮಾಡಿದ್ದು ಐದು ಖಂಡಗಳಲ್ಲಿ ಪ್ರಕಾಶಿತಗೊಳಿಸಿದ್ದಾರೆ. ಅವರು ತಮ್ಮ ಈ ಸಂಶೋಧನೆ ಪ್ರಬಂಧದಲ್ಲಿ ಶಿಲ್ಪಶಾಸ್ತ್ರದ ವಿಷಯದಲ್ಲಿ ಸಾಧ್ಯವಾದಷ್ಟು ಸಮಸ್ತ ಸಾಮಗ್ರಿಯ ವಿಶ್ಲೇಷಣೆ ಮಾಡಿದ್ದಾರೆ. ಈ ಗ್ರಂಥದ ಪ್ರಥಮ ಖಂಡದಲ್ಲಿ ಅವರು ಶಿಲ್ಪಶಾಸ್ತ್ರ ವಿಷಯಕ್ಕೆ ಸಂಬಂಧಿಸಿದ 194 ಗ್ರಂಥಗಳ ಸೂಚಿಯನ್ನು ನೀಡಿದ್ದಾರೆ. ಇದಲ್ಲದೆ ಡಾ॥ ಪಿ.ಕೆ. ಆಚಾರ್ಯ ಅವರು 7 ಭಾಗಗಳಲ್ಲಿ ಸಂಪಾದಿಸಿದ ಮಾನಸಾರ ಗ್ರಂಥದಲ್ಲಿ 32 ಪೂರ್ವಿಕ ಆಚಾರ್ಯರ ಉಲ್ಲೇಖವಿದೆ. ಇದರಿಂದ ವಾಸ್ತು ಶಿಲ್ಪದ ಬಗ್ಗೆ ಲಕ್ಷಣ ಗ್ರಂಥಗಳ ರಚನೆಯು ತುಂಬ ಪ್ರಾಚೀನ ಕಾಲದಿಂದಲೇ ಪ್ರಾರಂಭವಾಗಿತ್ತು ಎಂದು ತಿಳಿದು ಬರುತ್ತದೆ.

ಈ ರೀತಿಯಲ್ಲಿ ಶಿಲ್ಪಕ್ಕೆ ಸಂಬಂಧಿಸಿದ ರಚನೆಯೂ ವಿಶ್ವಕರ್ಮನಿಂದ ಆರಂಭವಾಗಿ ಸುಮಾರು 16ನೇ ಶತಮಾನದವರೆಗೆ ನಿರಂತರವಾಗಿಯೂ ನಡೆದಿದೆ. ಶ್ರೀಕುಮಾರ ಅವರ 'ಶಿಲ್ಪ ರತ್ನ'ವು ಗ್ರಂಥವು ಅಂತಿಮ ಪ್ರೌಢ ಗ್ರಂಥವಾಗಿದ್ದು, ಇದನ್ನು 16ನೇ ಶತಾಬ್ದಿಯಲ್ಲಿ ರಚಿಸಲಾಯಿತು.

### ಚಿತ್ರಕಲೆಯ ಬಗೆಗಿನ ವಿಶಿಷ್ಟ ಗ್ರಂಥ

ಮೇಲೆ ಹೇಳಿದ ಶಿಲ್ಪ ಶಾಸ್ತ್ರ ವಿಷಯದ ಗ್ರಂಥಗಳಲ್ಲಿ ವಾರ್ತಾ, ಶಿಲ್ಪ, ವ್ಯವಸಾಯ, ರಾಜನೀತಿ, ಧರ್ಮಶಾಸ್ತ್ರ, ಪಶುಪಾಲನೆ ಮತ್ತು ಅರ್ಥ ಶಾಸ್ತ್ರ ಮುಂತಾದ ಅನೇಕ ವಿಷಯಗಳ ಪ್ರಸ್ತಾವಿದೆ. ಈ ಕೆಲವು ಗ್ರಂಥಗಳಲ್ಲಿ ಚಿತ್ರಕಲೆಯ ಬಗ್ಗೆ ಚರ್ಚೆ ಮಾಡಿರುವುದು ಕಂಡು ಬರುತ್ತದೆ. ಚಿತ್ರಕಲೆಯ ಬಗ್ಗೆ ವಿಶೇಷವಾದ ವಿಚಾರವನ್ನು ಮಾಡಿರುವ ಗ್ರಂಥಗಳನ್ನು ಓದಿದಾಗ ಭಾರತೀಯ ಪ್ರಾಚೀನ ಚಿತ್ರಕಲೆಯ ಸಮೃದ್ಧಿಯ ಪರಿಚಯವಾಗುತ್ತದೆ. ಇವುಗಳಲ್ಲಿ ವಿಶ್ವಕರ್ಮ ಪ್ರಕಾಶ, ಮಯಮತ, ಮಾನಸಾರ, ಚಿತ್ರಸೂತ್ರ, ಚಿತ್ರಲಕ್ಷಣ, ಚಿತ್ರಕರ್ಮ, ಶಿಲ್ಪ ಶಾಸ್ತ್ರ, ಸಮರಾಂಗಣ ಸೂತ್ರಧಾರ, ಕಲಾ ವಿಲಾಸ, ಮಾನಸೋಲ್ಲಾಸ, ವೃತ್ತಾಂತ ಪ್ರಕರಣ ಮತ್ತು ಶಿಲ್ಪ ಕಲಾ ದೀಪಿಕಾ ಇವುಗಳು ಪ್ರಮುಖವಾದವುಗಳು. ಇವುಗಳಲ್ಲಿ ಅತ್ಯಂತ ಪ್ರಮುಖವಾದವುಗಳೆಂದರೆ ವಿಷ್ಣುಧರ್ಮೋತ್ತರ ಪುರಾಣದ 'ಚಿತ್ರಸೂತ್ರ', ನಗ್ನಜಿತ್ ಅಥವಾ ಭಯಜಿತ್‌ನ 'ಚಿತ್ರಲಕ್ಷಣ', ಭೋಜನ 'ಸಮರಾಂಗಣ ಸೂತ್ರಧಾರ' ಮತ್ತು ಸೋಮೇಶ್ವರ 'ಮಾನಸೋಲ್ಲಾಸ'. ಮುಂದೆ ಚಿತ್ರಕಲೆಯ ಬಗ್ಗೆ ವಿವೇಚನೆ ಮಾಡಿದ ಸಾವಿರಾರು ಪ್ರಾಚೀನ ಗ್ರಂಥ'ಗಳು ಉಪಲಬ್ಧವಾದವು. ಅವೆಲ್ಲವುಗಳಲ್ಲಿ ವಿಷ್ಣು ಧರ್ಮೋತ್ತರ ಪುರಾಣದ 'ಚಿತ್ರಸೂತ್ರ' ಒಂದು ಪ್ರೌಢ ಮತ್ತು ಸರ್ವಾಂಗೀಣ ರಚನೆಯಾಗಿದೆ. ಈ ಗ್ರಂಥದಲ್ಲಿ ವರ್ಣಿಸಿರುವ ಚಿತ್ರಕಲೆಯ ವಿಷಯದ ಪ್ರಾವಿಧಿಕ ಸಾಮಗ್ರಿಯ ಬಗ್ಗೆ ವಿಸ್ತಾರವಾಗಿ ವಿವೇಚನೆ ಮಾಡಲಾಗಿದೆ. ಈ ವಿಷಯದ ಬಗ್ಗೆ ಎರಡನೆಯ ಪ್ರೌಢ ಗ್ರಂಥವೆಂದರೆ ನಗ್ನಜಿತ್‌ನ 'ಚಿತ್ರ ಲಕ್ಷಣ'. ಈ ಕಾಲದಲ್ಲಿ ಗ್ರಂಥಗಳ ರಚನೆಯು ಸುಮಾರು ಏಕಕಾಲಕ್ಕೆ ಆಗಿದೆ. (6-7ನೆಯ ಶತಮಾನ)

### ನಗ್ನಜಿತನ ಚಿತ್ರ'ಲಕ್ಷಣಗಳು

ತಂಜಾವೂರ ಗ್ರಂಥ ಮಾಲೆಯ 123ನೇ ಖಂಡದಲ್ಲಿ ನಾಲ್ಕು ಖಂಡಗಳು ಶಿಲ್ಪಕ್ಕೆ ಸಂಬಂಧಿಸಿದವುಗಳು. ಶಿಲ್ಪಕ್ಕೆ ಸಂಬಂಧಿಸಿದ ಆ 4 ಗ್ರಂಥಗಳು ಯಾವುವೆಂದರೆ 1) ದಶತಲ ನ್ಯಗ್ರೋಧ ಪರಿಮಂಡಲ ಬುದ್ಧ ಪ್ರತಿಮಾ, 2) ಸಂಬುದ್ಧ ಭಾಷಿತ ಪ್ರತಿಮಾಲಕ್ಷಣ ವಿವರಣ, 3) ಪ್ರತಿಮಾಲಕ್ಷಣ, 4) ಚಿತ್ರಲಕ್ಷಣ. ಮೊದಲ ಮೂರು ಗ್ರಂಥಗಳಲ್ಲಿ ಚಿತ್ರ ವಿದ್ಯೆಯ ಬಗ್ಗೆಯೂ ವಿಚಾರ ಮಾಡಲಾಗಿದೆ. ಆದರೆ ಅದರಲ್ಲಿ ಪ್ರತಿಮಾ ವಿಜ್ಞಾನಕ್ಕೇ ಪ್ರಾಮುಖ್ಯತೆ ಇರುವುದು. ಚಿತ್ರಕಲೆಯ ಬಗೆಗಿನ ಪ್ರೌಢ ರ ಚನೆ ಎಂದರೆ 'ಚಿತ್ರಲಕ್ಷಣ'ವೇ. ಈ ಗ್ರಂಥದ

ಮೂರು ಅಧ್ಯಾಯಗಳು ಮಾತ್ರ ಲಭ್ಯ ಇದ್ದು ಅದನ್ನು ಅಧ್ಯಯನ ಮಾಡಿದರೆ, ಅದೊಂದು ಅಪೂರ್ಣ ಗ್ರಂಥ ಎಂಬುದು ಸ್ಪಷ್ಟವಾಗುತ್ತದೆ. ಈ ಗ್ರಂಥದ ಮಂಗಲಾಚರಣ (ಅಧ್ಯಾಯ)ದಲ್ಲಿ, ಅದು ವಿಶ್ವಕರ್ಮ ನಗ್ನಜಿತನಿಂದ ರಚಿತ ನಿರ್ದಿಷ್ಟ ಲಕ್ಷಣಗಳ ಸಂಗ್ರಹ ಎಂದು ಹೇಳಲಾಗಿದೆ. ಈ ಗ್ರಂಥದ ಉಪಲಬ್ಧ ಅನುವಾದವು ಮೂಲ ಗ್ರಂಥಕ್ಕೆ ಸಂಬಂಧಪಟ್ಟುದು ಅಥವಾ ಅದರ ಸಂಸ್ಕರಣ ಮಾತ್ರವಾಗಿರುತ್ತದೆ. ಈ ವಿಷಯವಾಗಿ ನಿಶ್ಚಿತವಾಗಿ ಏನನ್ನೂ ಹೇಳಲಾಗದು. ಆದರೆ ಈ ಗ್ರಂಥವು ಆರು ಏಳನೇ ಶತಮಾನದ ಸುಮಾರಿಗೆ ಪ್ರಸಿದ್ಧವಾಗಿತ್ತು ಎಂದು ನಂಬಬಹುದಾಗಿದೆ.

ಪ್ರಸ್ತಾವನೆಯಲ್ಲಿ ಹೇಳಿರುವಂತೆ ಒಂದು ವೇಳೆ ಈ ಗ್ರಂಥವು ನಗ್ನಜಿತನ ನಿರ್ದಿಷ್ಟ ಲಕ್ಷಣಗಳ ಸಂಗ್ರಹವಾಗಿದ್ದರೆ, ಅದರ ಸಂಗ್ರಹಕಾರನು ಬೇರೆಯ ವ್ಯಕ್ತಿಯೇ ಆಗಿರಬೇಕು. ಆದರೆ ಇದು ಸತ್ಯವಾದರೆ, ವಿಶ್ವಕರ್ಮ ಮತ್ತು ನಗ್ನಜಿತರು ಖಂಡಿತವಾಗಿಯೂ ಚಿತ್ರಕಲೆಯ ಭಿನ್ನಭಿನ್ನ ಶೈಲಿಗಳನ್ನು ನಿರ್ಮಿಸಿರಬಹುದು ಎಂದು ಊಹಿಸಬಹುದಾಗಿದೆ.

ವಿಭಿನ್ನ ಪ್ರಾಚೀನ ಗ್ರಂಥಗಳಲ್ಲಿ ರಾಜಾ ನಗ್ನಜಿತನ ಉಲ್ಲೇಖವಿದೆ. 'ಶತಪಥ ಬ್ರಾಹ್ಮಣ' ಎಂಬ ಗ್ರಂಥದಲ್ಲಿ ನಗ್ನಜಿತನನ್ನು ಗಾಂಧಾರ ದೇಶ (ಸೀಮಾಪ್ರಾಂತ)ದ ರಾಜನೆಂದು ಹೇಳಲಾಗಿದೆ. ಇದೇ ರೀತಿ 'ಮಹಾಭಾರತ' ಮತ್ತು ಜೈನ ಸೂತ್ರಗಳಲ್ಲಿ ನಗ್ನಜಿತನನ್ನು ಇದೇ ರೀತಿ ಪರಿಚಯಿಸಲಾಗಿದೆ. ಆದರೆ ಅವನ ಜೀವನ ಚರಿತ್ರೆಯೊಂದಿಗೆ ಅವನ ಮೇಲೆ ಹೇಳಿದ ಗ್ರಂಥದ ಉಲ್ಲೇಖವನ್ನು ಎಲ್ಲಿಯೂ ಮಾಡಿಲ್ಲ. ಆದರೂ ನಗ್ನಜಿತನು ಗಾಂಧಾರ ರಾಜನೆಂದೇ ಹೇಳುವುದು ಯುಕ್ತ, ಏಕೆಂದರೆ ಗಾಂಧಾರ ಶಿಲ್ಪದಲ್ಲಿನ ಚಿತ್ರಕಲೆಯ ಲಕ್ಷಣಗಳು ಸ್ವರೂಪವು 'ಚಿತ್ರ ಲಕ್ಷಣ'ದ ವಿಧಾನಗಳಿಂದ ಪ್ರಭಾವಿತ ಆಗಿದೆ. ಇದರೊಂದಿಗೆ, ಮಧ್ಯ ಏಶಿಯಾದ ಚಿತ್ರಗಳಲ್ಲಿ ಗಾಂಧಾರ ಶೈಲಿಯ ಪ್ರಭಾವಕ್ಕಿಂತ ಭಾರತೀಯತೆಯ ಪ್ರಭಾವವೇ ಅಧಿಕವಿದೆ. ಇದಲ್ಲದೆ ತಿಬ್ಬತನ ಧಾರ್ಮಿಕ ಚಿತ್ರಗಳ ಮೇಲೆ ಈ ಗ್ರಂಥದ ಸಂವಿಧಾನಗಳ ಪ್ರಭಾವವು ಎಷ್ಟಾಗಿದೆಯೆಂದರೆ ಈ ಚಿತ್ರಗಳೆಲ್ಲವೂ ಭಾರತದವುಗಳೆಂಬ ಭಾವನೆ ಬರುತ್ತದೆ.

ಗ್ರಂಥದ ಮೊದಲನೆಯ ಅಧ್ಯಾಯದಿಂದಲೇ ನಗ್ನಜಿತನು ವಿಶ್ವ ಕರ್ಮನ ಶಿಷ್ಯನೆಂಬುದೂ ಮತ್ತು ಬ್ರಹ್ಮನ ಎದುರಿಗೆ ನಗ್ನ ಜಿತನು ಚಿತ್ರ ವಿದ್ಯೆಯನ್ನು ಕಲಿಯುವ ಇಚ್ಛೆಯನ್ನು ಪ್ರಕಟಿಸಿದಾಗ ಬ್ರಹ್ಮನು ವಿಶ್ವ ಕರ್ಮನನ್ನು ಕಳಿಸಿದನೆಂದು ತಿಳಿದು ಬರುತ್ತದೆ. ವಿಶ್ವಕರ್ಮನು ಅವನಿಗೆ ಈ ವಿಷಯವಾಗಿ ದೀಕ್ಷೆ ನೀಡಿದನು.

### ಚಿತ್ರಲಕ್ಷಣದ ಅನುಸಾರವಾಗಿ ಚಿತ್ರವಿದ್ಯೆಯ ಉತ್ಪತ್ತಿಯ ಕಥೆ

'ಚಿತ್ರ ಲಕ್ಷಣ'ದ ಮೊದಲನೆಯ ಅಧ್ಯಾಯದಲ್ಲಿ ಚಿತ್ರಕಲೆಯ ಉತ್ಪತ್ತಿಯ ವರ್ಣನೆಯನ್ನು ಮಾಡುತ್ತ ಈ ರೀತಿಯ ಹೇಳಲಾಗಿದೆ ಪುರಾತನ ಕಾಲದಲ್ಲಿ ಭಯಜಿತ ಎಂಬ ಒಬ್ಬ ಧರ್ಮಪರಾಯಣದ ರಾಜನ ರಾಜ್ಯದಲ್ಲಿ ಅಕಸ್ಮಾತ್ತಾಗಿ ಒಬ್ಬ ಬ್ರಾಹ್ಮಣ ಪುತ್ರನು ಮೃತನಾದನು. ಪುತ್ರ ಶೋಕದಿಂದ ಬ್ರಾಹ್ಮಣನು ಅಂದಿನ ಪದ್ಧತಿಯಂತೆ ರಾಜನ ಬಳಿಗೆ ಹೋದನು. ನಂತರ ಆ ರಾಜನಿಗೆ ಹೀಗೆ ಹ ಏಳಿದನು. 'ನೀನು ನಿಜವಾದ ಕ್ಷತ್ರಿಯ ರಾಜನಾಗಿದ್ದರೆ, ಧರ್ಮದಲ್ಲಿ ಮತ್ತು ಬ್ರಾಹ್ಮಣರಲ್ಲಿ ಕಿಂಚಿತ್ತಾದರೂ ನಿನಗೆ ವಿಶ್ವಾಸವಿದ್ದರೆ, ನನ್ನ ಪುತ್ರನನ್ನು ಬದುಕಿಸು'.

ಈ ಮಾತನ್ನು ಕೇಳಿ ಧರ್ಮಾತ್ಮನಾದ ರಾಜನಿಗೆ ತುಂಬ ದುಃಖವಾಯಿತು. ಅವನು ಯೋಗ ಬಲದಿಂದ ಪ್ರಾರ್ಥಿಸಿದನು. ಆದರೆ ಯಜರಾಜನು ರಾಜನ ಪ್ರಾರ್ಥನೆಯನ್ನು ಸ್ವೀಕರಿಸಲಿಲ್ಲ, ಇದರ ಪರಿಣಾಮವಾಗಿ ಇಬ್ಬರಲ್ಲಿಯೂ ಘನಘೋರ ಯುದ್ಧವಾಯಿತು, ಅದರಲ್ಲಿ ಯಮರಾಜನು ಸೋತನು. ಸೋತನಂತರವೂ ಯಮರಾಜನು ಬ್ರಾಹ್ಮಣ ಪುತ್ರನನ್ನು ಬದುಕಿಸಲು ಒಪ್ಪಲಿಲ್ಲ. ಆಗ ಸ್ವಯಂ ಬ್ರಹ್ಮನು ಅವತರಿಸಿ ಭಯಜಿತ ರಾಜನಿಗೆ ಯಮರಾಜನ ಸೋಲಿನ ಕಾರಣವನ್ನು ತಿಳಿಸಿದನು. ಮತ್ತು ಬ್ರಾಹ್ಮಣನ ಮೃತಪುತ್ರನ ಚಿತ್ರವನ್ನು ಪ್ರಾಣ ಸಂಚಾರ ಮಾಡಿದನು. ಅನಂತರ ಬ್ರಹ್ಮನು ಭಯಜಿತ ರಾಜನಿಗೆ ಹೀಗೆಂದು ಹೇಳಿದನು. 'ನೀನು ನಗ್ನ ಪ್ರೇತವನ್ನು ಜಯಿಸಿದ್ದೀಯೆ. ಇಂದಿನಿಂದ ನಿನ್ನ ಹೆಸರು ನಗ್ನಜಿತ ಎಂದಾಗಲಿ, ನಿನ್ನ ಈ ಚಿತ್ರವು ಸೃಷ್ಟಿಯ ಪ್ರಥಮ ಚಿತ್ರ. ಮರ್ತ್ಯ ಲೋಕದಲ್ಲಿ ಈ ಕಲ್ಯಾಣಕಾರೀ ಚಿತ್ರಕಲೆಯ ಪ್ರಥಮ ಆಚಾರ್ಯ (ಗುರು) ಎಂದು ನಿನ್ನನ್ನು ಕರೆಯಲಾಗುತ್ತದೆ. ಇದೇ ರೀತಿಯಲ್ಲಿ ಚಿತ್ರವಿದ್ಯೆಯಿಂದ ಜಗತ್ತಿನ ಕಲ್ಯಾಣವಾಗುತ್ತದೆ ಮತ್ತು ಇದೇ ಕಾರಣದಿಂದಾಗಿ ನೀನು ಮರ್ತ್ಯಲೋಕದಲ್ಲಿ ಸದಾ ಪೂಜಿತನಾಗಿಯೇ ಇರುತ್ತೀಯೆ'

ಈ ರೀತಿ ಚಿತ್ರಕಲೆಯ ದೈವೀ ಉತ್ಪತ್ತಿಯ ವರ್ಣನೆಯನ್ನು ಮಾಡುತ್ತ ಎರಡನೆಯ ಅಧ್ಯಾಯದ ವಿಶ್ವಕರ್ಮ-ನಗ್ನಜಿತ್ ಸಂವಾದದಲ್ಲಿ-ಜಗತ್ತಿನ ಕಲ್ಯಾಣದ ಇಚ್ಛೆಯ ಪ್ರೇರಣೆಯಿಂದಾಗಿ ಇಂದ್ರಾದಿ ದೇವತೆಗಳು ತಮ್ಮ ಅಸ್ತ್ರ ಶಸ್ತ್ರ ಮತ್ತು ಮುದ್ರೆಗಳೊಂದಿಗೆ ತಮ್ಮ ತಮ್ಮ ಪ್ರತಿಕೃತಿಗಳನ್ನು ಮಾಡಿ ಬ್ರಹ್ಮನಿಗೆ ನೀಡಿದರು. ಅವುಗಳನ್ನು ಬ್ರಹ್ಮ ಅರ್ಚನೆ ಪೂಜೆಗಾಗಿ ಮರ್ತ್ಯ ಲೋಕಕ್ಕೆ ಕಳುಹಿಸಿದನು ಎಂದಿದೆ.

### 'ಚಿತ್ರ ಲಕ್ಷಣ'ದ ಚಿತ್ರವಿಧಾನ

ಗ್ರಂಥದ ಮೂರನೆಯ ಅಧ್ಯಾಯದಲ್ಲಿ ಚಿತ್ರಕಲೆಯ ಸಂವಿಧಾನದ ಮೇಲೆ ಗಮನ ಹರಿಸಲಾಗಿದೆ. ಅದರಲ್ಲಿ ಪುರುಷರು, ಸ್ತ್ರೀಯರು, ಪಶು ಪಕ್ಷಿಗಳು ಮತ್ತು ಪ್ರಕೃತಿ ಇತ್ಯಾದಿಗಳ ಚಿತ್ರ ರಚನೆಯ ಭಿನ್ನ ಭಿನ್ನ ಚಿತ್ರ ವಿಧಾನಗಳನ್ನು ಹೇಳಲಾಗಿದೆ. ವಿಭಿನ್ನ ಆಕೃತಿಗಳ ಅಂಗ ಉಪಾಂಗಗಳಿಗೆ ಎಷ್ಟು ಉದ್ದ ಅಗಲಗಳು ಇರಬೇಕು ಎಂಬುದರ ಬಗ್ಗೆಯೂ ಉಲ್ಲೇಖವಿದೆ. ಒಬ್ಬ ಚಿತ್ರಕಾರನು ಪ್ರಾಕೃತಿಕ ನಿಯಮಗಳ ಮಾಹಿತಿಯು ತಿಳಿದಿರುವುದು ಅವಶ್ಯಕವಿದೆ ಎಂಬುದನ್ನು ತಿಳಿಸುತ್ತಾ ಭಾವ ಪ್ರಧಾನ ಚಿತ್ರಗಳನ್ನು ಅವನು ಪ್ರಶಂಸೆ ಮಾಡಿದ್ದಾನೆ. ಈ ಭಾವ ಪ್ರಧಾನ ಚಿತ್ರಗಳಲ್ಲಿ ಆಂತರಿಕ ಭಾವನೆಗಳನ್ನು ಉಚಿತ ರೂಪದಲ್ಲಿ ಚಿತ್ರಿಸುವುದಕ್ಕಾಗಿ ಅನೇಕ ವೈಜ್ಞಾನಿಕ ವಿಧಾನಗಳನ್ನು ತಿಳಿಸಿದ್ದಾನೆ.

ಕಣ್ಣಿನ ಚಿತ್ರಣದ ವಿಷಯವಾಗಿ ಗ್ರಂಥಕಾರನು ಸೂಕ್ಷ್ಮವಾಗಿ ವಿಚಾರ ಮಾಡಿದ್ದಾನೆ. ಅಲ್ಲಿ ಆಕಾರದ ಭೇದದ ಆಧಾರದಿಂದ ಐದು ರೀತಿಯ ಕಣ್ಣುಗಳ ಬಗ್ಗೆ ತಿಳಿಸಲಾಗಿದೆ. 1) ಧನುರಾಕೃತಿ, 2) ಉತ್ಪಲ ಪತ್ರಾಕೃತಿ, 3) ಮತ್ಸ್ಯೋದರಾಕೃತಿ, 4) ಪದ್ಮ ಪತ್ರಾಕೃತಿ, 5) ಕಟಿಸದೃಶಾಕೃತಿ. ಭೋಗವೃತ್ತಿಯನ್ನು ಅಭಿವ್ಯಕ್ತ ಮಾಡುವ ಕಣ್ಣುಗಳು ಧನುರಾಕೃತಿ, ಸಾಮಾನ್ಯ ಸ್ವರೂಪವನ್ನು ತಿಳಿಸುವ ಕಣ್ಣುಗಳು ಕಣ್ಣುಗಳು ಉತ್ಪಲ ಪತ್ರಕೃತಿ ರಾಜ, ಆದರ್ಶ ಪುರುಷ, ಪ್ರೇಮಿ ಮತ್ತು ರಮಣೀಯ ಕಣ್ಣುಗಳು ಮತ್ಸ್ಯೋದರ ಕೃತಿಯವು, ಭಯ ಮತ್ತು ಕ್ರಂದ (ಅಳು)ವನ್ನು ಸೂಚಿಸುವ ಕಣ್ಣುಗಳು ಪದ್ಮಪತ್ರಾಕೃತಿಯವು ಮತ್ತು ಮೋಹ, ಕ್ರೋಧ ಮುಂತಾದ ಭಾವನೆಗಳನ್ನು ವ್ಯಕ್ತಪಡಿಸಬಹುದಾದ ಕಣ್ಣುಗಳು ಕಟಿಸದೃಶಾ ಕೃತಿಯವು (ಕಟಿಯಂತೆ ಎರಡೂ ಕೊನೆಯಲ್ಲಿ ಅಗಲ, ಆದರೆ ಮಧ್ಯದಲ್ಲಿ ತೆಳುವಾಗಿಯೂ ಇರುವ) ಆಗಿರಬೇಕು. ಕಣ್ಣುಗಳ ಚಿತ್ರಣ ಹೇಗಿರಬೇಕೆಂದರೆ, ಅವುಗಳಿಂದ ಮನಸ್ಸಿನ ಸಂಪೂರ್ಣ ಭಾವನೆಯ ಸ್ಪಷ್ಟವಾಗಬೇಕು.

### ಭೋಜನ 'ಸಮರಾಂಗಣ ಸೂತ್ರಧಾರ'

ಪ್ರಾಚೀನ ಭಾರತದ ಇತಿಹಾಸದಲ್ಲಿ ಪರಮಾರ ವಂಶದ ರಾಜನಾದ ಭೋಜ (1010-1055)ನೇ ಇಸವಿಯ ಹೆಸರನ್ನು ಅಶೋಕ, ಚಂದ್ರಗುಪ್ತ, ವಿಕ್ರಮಾದಿತ್ಯ ಮತ್ತು ಕನಿಷ್ಕ ಮುಂತಾದ ಯಶಸ್ವಿ ಸಾಮ್ರಾಟರ ಸಾಲಿನಲ್ಲಿ ಸ್ಮರಿಸಬಹುದು. ಅವರಿಗೆ ಇರುವ ಈ ಗೌರವವು ರಾಜನೀತಿ ಕುಶಲತೆಗಾಗಿ ಅಥವಾ ಸುಧಾರಣೆಯ ಕಾರ್ಯಗಳ ಕಾರಣಕ್ಕಾಗಿ ಅಲ್ಲ, ಆದರೆ ಅವರ ವಿದ್ಯಾನುರಾಗದ ಕಾರಣದಿಂದಾಗಿ. ಬೇರೆ ದೊಡ್ಡ ದೊಡ್ಡ ಪ್ರಸಿದ್ಧ ಸಾಮ್ರಾಟರಂತಲ್ಲದೆ, ಭೋಜನ ವ್ಯಕ್ತಿತ್ವದ ಒಂದು ವಿಶೇಷತೆ ಎಂದರೆ ಅವನು ವಿದ್ವಾಂಸರ ಪರಮ ಅನುರಾಗಿಯೂ ಮತ್ತು ಅದರೊಂದಿಗೆ ಅನೇಕ ವಿಷಯಗಳ ದೊಡ್ಡ-ದೊಡ್ಡ ಗ್ರಂಥಗಳ ಕರ್ತೃವೂ ಆಗಿರಬಹುದು. ಅವನು ರಚಿಸಿದ ಸುಮಾರು 34 ಗ್ರಂಥಗಳು ಈವರೆಗೆ ಲಭ್ಯವಾಗಿದ್ದು,

ಅವುಗಳು ಜ್ಯೋತಿಷ್ಯ, ಕಾವ್ಯ ಶಾಸ್ತ್ರ, ಯೋಗ ಶಾಸ್ತ್ರ, ರಾಜನೀತಿ, ಧರ್ಮಶಾಸ್ತ್ರ, ಶಿಲ್ಪಶಾಸ್ತ್ರ, ಕಾವ್ಯ, ನಾಟಕ, ವ್ಯಾಕರಣ, ಆಯುರ್ವೇದ, ಶೈವಮತ ಮತ್ತು ಕೋಶ ಮುಂತಾದ ವಿಷಯಗಳ ಬಗ್ಗೆ ಇವೆ.

ಅವನು ಶಿಲ್ಪಶಾಸ್ತ್ರದ ಬಗ್ಗೆ ಎರಡು ಗ್ರಂಥಗಳನ್ನು ರಚಿಸಿದ್ದು, ಅವುಗಳ ಹೆಸರುಗಳು 'ಸಮರಾಂಗಣ ಸೂತ್ರಧಾರ' ಮತ್ತು 'ಯುಕ್ತಿ ಕಲ್ಪತರು' ಎಂದು ಇದೆ. ಮೊದಲನೆಯ ಗ್ರಂಥ'ವು ತುಂಬ ಮಹತ್ವಪೂರ್ಣವಾದುದ್ದಾಗಿದೆ. ಅದರಲ್ಲಿ 84 ಅಧ್ಯಾಯಗಳಿವೆ ಮತ್ತು ಅದರ ವಿಷಯ ಸಾಮಗ್ರಿಯು ಏಳು ಭಾಗಗಳಲ್ಲಿ ವಿಭಾಗಿತವಾಗಿದೆ. ಅವುಗಳ ಹೆಸರುಗಳು ಹೀಗಿವೆ. ಪ್ರಾಥಮಿಕಾ, ಪುರಪ್ರವೇಶ, ಭವನ ನಿವೇಶ, ಪ್ರಾಸಾದ ನಿವೇಶ, ಪ್ರತಿಮಾ ನಿರ್ಮಾಣ, ಯಂತ್ರ ಘಟನಾ ಮತ್ತು ಚಿತ್ರಕರ್ಮ. 'ಸಮರಾಂಗಣ ಸೂತ್ರಧಾರ'ದ ಚಿತ್ರಕರ್ಮವನ್ನು ಬಹಳ ವಿದಗ್ಧತೆಯಿಂದ ಪಾಂಡಿತ್ಯಪೂರ್ಣವಾಗಿ ಬರೆಯಲಾಗಿದೆ. ಇದನ್ನು ಆರು ಅಧ್ಯಾಯಗಳಲ್ಲಿ ವಿಭಾಗಿಸಲಾಗಿದೆ. ಚಿತ್ರೋದ್ದೇಶ್ಯ, ಭೂಮಿ ಬಂಧನ, ಲೇಪ್ಯ ಕರ್ಮಾದಿ, ಅಂಡಕ ಪ್ರಮಾಣ, ಮನೋತ್ಪತ್ತಿ ಮತ್ತು ರಸದೃಷ್ಟಿ ಲಕ್ಷಣ. ಇದರ 'ಲೇಪ್ಯಕರ್ಮ' ಮತ್ತು ರಸದೃಷ್ಟಿಲಕ್ಷಣ ಎಂಬ ಹೆಸರಿನ ಅಧ್ಯಾಯಗಳು ಚಿತ್ರ ಕಲೆಯ ಲಕ್ಷಣ ಗ್ರಂಥಗಳ ಪರಂಪರೆಯಲ್ಲಿ ತೀರಾ ಅಪೂರ್ವ ಸಾಮಗ್ರಿಯನ್ನು ಒದಗಿಸುತ್ತವೆ.

*(ಶ್ರೀ ಮರಿಶಾಮಾಚಾರ್ ಅವರ ಭಾರತೀಯ ಕಲೆ ಪುಸ್ತಕವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಯವರು ಉತ್ತಮ ಪುಸ್ತಕವೆಂದು ಪರಿಗಣಿಸಿದ್ದಾರೆ.)*

*(ಮುಂದುವರಿಯುವುದು)*

**TRIMURTI**

**JEWELLERS**

**GOLD AND DIAMOND ORNAMENTS**

460/4, Venkatesh Niwas,
Ground Floor,
Bhaudaji Road,
Opp Mysore Association,
Matunga (C.Rly.)
Mumbai-400 019.

Phone : **402 34 85**

## ಡಾ. ಮಂಜುನಾಥರ ಎರಡು ನಾಟಕಗಳ ಕೃತಿ ಬಿಡುಗಡೆ

*(ಪುಟ 4ರಿಂದ)*

ವಸ್ತುವಿಗೆ ಪೂರಕವಾಗಿ ಬಳಸಲ್ಪಟ್ಟಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮೈಸೂರು ಅಸೋಸಿಯೇಶನ್ನಿನ ಅಧ್ಯಕ್ಷರಾದ ದೊರೆಸ್ವಾಮಿ ಯವರು ಮಾತನಾಡುತ್ತಾ ಪ್ರತಿಭಾವಂತ ನಾಟಕಕಾರ ಡಾ. ಬಿ. ಆರ್. ಮಂಜುನಾಥರ ಇತರ ನಾಟಕಗಳನ್ನು ಶೀಘ್ರವೇ ಕೃತಿ ರೂಪದಲ್ಲಿ ತರುವುದಾಗಿ ಭರವಸೆಯಿತ್ತರು. ನಾಟಕಕಾರ ಡಾ. ಬಿ.ಆರ್. ಮಂಜುನಾಥ ಮಾತನಾಡುತ್ತಾ ನನ್ನ ಚಿಂತನೆ ಏನಿದ್ದರೂ ಕೃತಿ ಹೇಳುತ್ತದೆ. ಈ ಕೃತಿಗಳು ಜನರಿಗೆ ಮುಟ್ಟಿದರೆ ನನ್ನ ಪ್ರಯತ್ನ ಸಾರ್ಥಕ ಎಂದರು.

ಸಮಾರಂಭದ ಮೊದಲಿಗೆ ಕೆ. ಮಂಜುನಾಥಯ್ಯ ಪ್ರಾಸ್ತಾವಿಕವಾಗಿ ಮಾತನಾಡಿ ಮೈಸೂರು ಅಸೋಸಿಯೇಶನ್ನಿನ ರಂಗಭೂಮಿ ಇತಿಹಾಸವನ್ನು ನೆನಪಿಸಿ ಇನ್ನು ಮುಂದೆ ಪ್ರತಿ ತಿಂಗಳು ಸತತವಾಗಿ ಸಾಹಿತ್ಯ, ಸಂಗೀತ, ನಾಟಕ ಕಾರ್ಯಕ್ರಮಗಳು ಜರಗಲಿರುವುದಾಗಿ ತಿಳಿಸಿದರು. ಇದೇ ಸಂದರ್ಭದಲ್ಲಿ ನಾಟಕಗಳ ಮುಖಚಿತ್ರ ಬಿಡಿಸಿದ ಕಲಾವಿದ ದೇವದಾಸ ಶೆಟ್ಟಿಯವರನ್ನು ಪುಷ್ಪಗುಚ್ಛ ನೀಡಿ ಗೌರವಿಸಲಾಯಿತು. ಕಾರ್ಯಕ್ರಮವನ್ನು ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಜಿ.ಎನ್. ಉಪಾಧ್ಯ ನಿರೂಪಿಸಿದರು. ಭಾರತಿ ಪ್ರಸಾದ್ ಪ್ರಾರ್ಥನೆಗೈದರು. ಮೈಸೂರು ಅಸೋಸಿಯೇಷನ್ನಿನ ಕಾರ್ಯದರ್ಶಿ ಎಂ.ಎ.ಎನ್. ಪ್ರಸಾದ್ ವಂದಿಸಿದರು. ಮನೋರಂಜನೆ ಅಂಗವಾಗಿ ಮೈಸೂರು ಅಸೋಸಿಯೇಶನ್ ಕಲಾವಿದರಿಂದ ರಂಗಗೀತೆಗಳ ಕಾರ್ಯಕ್ರಮ ನಡೆಯಿತು.

**- ಡಾ. ಜಿ. ಎನ್. ಉಪಾಧ್ಯ**

## 'ಬಿಸಿಲ್ಗುದುರೆ'ಯ ಬೆನ್ನಹಿಂದೆ...

*(ಪುಟ 5ರಿಂದ)*

ಕ್ರಮ, ಕಾದಂಬರಿಯ ಸಾತತ್ಯವನ್ನು ಪುನಾಜೋಡಿಸುವ ಯತ್ನಗಳೆಲ್ಲವೂ ಈ ಹೇಳಿಕೆಗೆ ಪುಷ್ಟಿಯನ್ನು ನೀಡುತ್ತವೆ.

ಈ ಕೃತಿಗೆ ಸಮಕಾಲೀನ ಪ್ರಸ್ತುತತೆಯನ್ನು ಕಲ್ಪಿಸಿದ ಹಲವು ಅಂಶಗಳಲ್ಲಿ, ಅದು ಎತ್ತುವ, ಮಹತ್ವದ ಪ್ರಶ್ನೆಗಳೂ ಸೇರುತ್ತವೆ. ಹೆಣ್ಣಿನ ಆದ್ಯತೆಯು, ಕೌಟುಂಬಿಕ ಸ್ವಾಸ್ಥ್ಯ ಸಂರಕ್ಷಣೆಯೇ? ಇಲ್ಲ- ಸ್ವಂತದ ಅಭಿವೃದ್ಧಿ - ಪ್ರಗತಿಗಳೇ ಇವೆರಡನ್ನೂ ಜೊತೆಯಾಗಿ ಸಾಧಿಸುವುದು ಸಾಧ್ಯವೇ ಇಲ್ಲವೇ? ಗಂಡಿಗಿಲ್ಲದ, ಆಯ್ಕೆಯ ಗೊಂದಲಗಳು ಬರಿಯ ಹೆಣ್ಣನ್ನೇ ಬೆನ್ನಟ್ಟಬೇಕೇಕೆ? ಹೆಣ್ಣಿನ ಬದುಕು ಏಕೆ ಇಷ್ಟು ಸಂಕೀರ್ಣ? ಇವುಗಳಲ್ಲಿ, ಕೆಲವು ಸಂದಿಗ್ಧಗಳನ್ನು ನಾಟಕದ ಮುಗಿತಾಯವು ಪರಿಹರಿಸುತ್ತದೆ. ಹಳ್ಳಿಗೆ ವಿದಾಯ ಹೇಳುವ ಕ್ಷಣದಲ್ಲಿ, ಮೀರಾ ಕೈಗೆತ್ತಿಕೊಳ್ಳುವ Suit Case, ಪ್ರಯಾಣದ ನಿರಂತರತ್ವವನ್ನು ಸೂಚಿಸುತ್ತದೆ. ಹಾಗೆಯೇ ಈ ಗೊಂದಲ, ತಳಮಳಗಳೂ ಕೊನೆಕಾಣಲಾರವೆನ್ನುವ ಸಂದೇಶವನ್ನೂ ಕೊಡುತ್ತದೆ. ಅವಳು, ಮಗು ಕಾಮಾಕ್ಷಿಯನ್ನು ಶಾಮುವಿನ ಕೈಗೆ ಕೊಡುವ ಕ್ರಿಯೆಯೂ ಇಷ್ಟೇ ಅರ್ಥಪೂರ್ಣವಾಗಿದೆ. ಇದು, ಕೌಟುಂಬಿಕ ವ್ಯವಸ್ಥೆಯ ಮುಂದುವರಿಕೆ, ತನ್ನದು ಕವಲೊಡೆದ ದಾರಿ ಎನ್ನುವುದನ್ನು ಅವಳು ಮೌನವಾಗಿ ಸಂವಹಿಸಿದ ಕ್ರಮದಲ್ಲಿಯೇ ಹೆಣ್ಣಿನ ಆಯ್ಕೆಯ ಜಗತ್ತಿಗೆ ಸಂಬಂಧಿಸಿದ ವ್ಯಂಗ್ಯವಿದೆ.

ಒಟ್ಟಿನಲ್ಲಿ, ಸಾಮಯಿಕವಾದ, ಶಕ್ತಿಯುತವಾದ ವಸ್ತುವೊಂದಕ್ಕೆ ನಾಟಕೀಯ ಸ್ಪರ್ಶವನ್ನು ನೀಡಿದ ವಿಶಿಷ್ಟ ಕೃತಿಯಾಗಿ, 'ಬಿಸಿಲ್ಗುದುರೆ'ಯು ಅಭಿವ್ಯಕ್ತಿಯನ್ನು ಪಡೆದಿದೆ, ಸಾಹಿತ್ಯಿಕ ಮೌಲ್ಯ - ರಂಗಸಾಧ್ಯತೆಗಳೆರಡರ ಸಂದರ್ಭಗಳಲ್ಲೂ ಸಲ್ಲುತ್ತದೆ.

*ಕನ್ನಡದ ಕಸ್ತೂರಿ, ಕನ್ನಡದ ಮಲ್ಲಿಗೆ ಎನ್ನಿಸಿರುವ ಮುಂಬಯಿಯ ಮೈಸೂರು ಅಸೋಸಿಯೇಶನಿನ ಸಕಲ ಸದಸ್ಯರಿಗೆ ಆತ್ಮೀಯ ವಂದನೆಗಳು. ನೀವು ಆದರದಿಂದ ನೆನಪಿನ ಮಲ್ಲಿಗೆಯಲ್ಲಿ ಈ ಕನ್ನಡ ಕಿಂಕರನನ್ನು ನೆನೆಸಿ ದೀಪಾವಳಿಯ ಬೆಳಕು ತುಂಬಿ, ಬದುಕಿಗೆ ನಿಮ್ಮ ದಿಯನ್ನು ಕೋರಿದ ಪತ್ರವು ಇದೀಗ ಕೈಸೇರಿ ಒಂದು ಬಗೆಯ ಧೈರ್ಯ ಮೂಡಿ ಬಂದಿತು. ನಿಮ್ಮ ವೇದಿಕೆಯ ಮುಖಾಂತರ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳ ಅಂತರ ಭಾರತೀಯ ತತ್ವ ಪ್ರಕಾಶಮಾನವಾಯಿತು.*

*ಅಂತಃಕರುಣೆಯ ಅಭಿಮಾನದ ಕನ್ನಡ ಕಲ್ಲು ಸಕ್ಕರೆಯ ಸವಿಯಿಂದ ತುಂಬಿದುದು ನಿಮ್ಮ ಹಾರೈಕೆ. ಅದಕ್ಕಾಗಿ ಧನ್ಯವಾದಗಳು.*

*ಮುಂಬಯಿಯ ಸಮಸ್ತ ಕನ್ನಡಕ್ಕೆ ಈ ಬೆಳಕಿನ ಹಬ್ಬ ನೆಮ್ಮದಿ ನೀಡಲಿ.*

*- ವಸಂತ ಕುಷ್ಟಗಿ*

## MATRIMONIAL

Alliance invited for a tall handsome Telugu Mulakandu Brahmin boy 28 years, BE in Computers working in LA, USA from Parents of Profesionally qualified girls of 22 to 24 years age. Kannada Smartha or Telugu Brahmins from Mumbai or Karnataka.

*Contact:* Tel.: 022-7820811 or Email : rajanibalu@hotmail.com.

## ಗಾನ ಕಲಾ ಸಿಂಧು ವಿದ್ವಾನ್ ಡಿ. ಸುಬ್ಬರಾಮಯ್ಯನವರ ಜನ್ಮ ಶತಮಾನೋತ್ಸವ ಅರ್ಥಪೂರ್ಣ ಸ್ಮರಣೆ

ಬೆಂಗಳೂರಿನ ಶ್ರೀ ಡಿ. ಸುಬ್ಬರಾಮಯ್ಯ ಫೈನ್ ಆರ್ಟ್ಸ್ ಟ್ರಸ್ಟ್‌ನ ಆಶ್ರಯದಲ್ಲಿ ವಿದ್ವಾನ್ ಡಿ. ಸುಬ್ಬರಾಮಯ್ಯನವರ ಜನ್ಮ ಶತಮಾನೋತ್ಸವವನ್ನು ನಾಲ್ಕು ದಿನಗಳ ಕಾಲ ಜಯನಗರದ ಶ್ರೀ ಜಯರಾಮ ಸೇವಾ ಮಂಡಳಿ ಸಭಾಗೃಹದಲ್ಲಿ' ಆಚರಿಸಲಾಯಿತು. ಈ ಉತ್ಸವವನ್ನು ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷರಾದ ಶ್ರೀಮತಿ ಎಚ್. ಆರ್. ಲೀಲಾವತಿಯವರು ಉದ್ಘಾಟಿಸಿದರು.

ಶ್ರೀ ಸುಬ್ಬರಾಮಯ್ಯನವರು ಐದು ದಶಕಗಳಿಗೂ ಹೆಚ್ಚು ಕಾಲ ಕರ್ನಾಟಕ ಸಂಗೀತ ವೇದಿಕೆಯಲ್ಲಿ ರಾರಾಜಿಸಿದವರು. ಸಂಗೀತ ಕ್ಷೇತ್ರಕ್ಕೆ ಅವರ ಕೊಡುಗೆ ಅಪಾರ. ಇಂತಹ ಮಹನೀಯರ ಪುಣ್ಯ ಸ್ಮರಣೆಯನ್ನು ಅವರ ಜನ್ಮ ಶತಮಾನ ವರ್ಷದಲ್ಲಿ ಈ ಉತ್ಸವದ ಮೂಲಕ ಮಾಡುತ್ತಿರುವುದು ಅರ್ಥಪೂರ್ಣ ಮತ್ತು ಅವರಿಗೆ ಸಲ್ಲಿಸುವ ಗೌರವ ಎಂದ ತಿಳಿಸಿ ಉತ್ಸವಕ್ಕೆ ಯಶಸ್ಸನ್ನು ಹಾರೈಸಿದರು.

ಉತ್ಸವ ಅಂಗವಾಗಿ ಶ್ರೀ ಡಿ. ಸುಬ್ಬರಾಮಯ್ಯನವರ ಜೀವನ ಸಾಧನೆಗಳನ್ನೊಳ ಗೊಂಡ ವಿಚಾರ ಸಂಕಿರಣವೊಂದನ್ನು ಏರ್ಪಡಿಸ ಲಾಗಿತ್ತು. ಈ ವಿಚಾರ ಸಂಕಿರಣದಲ್ಲಿ ವಿದ್ವಾನ್ ಸೀತಾರಾಂ ಸುಬ್ಬರಾಮಯ್ಯನವರ ಕಾಲದಲ್ಲಿನ ಸಂಗೀತ ಕಚೇರಿಗಳು ಕರ್ನಾಟಕ ಕಲಾ ತಿಲಕ ಬೆಂಗಳೂರು ವೆಂಕಟರಾಂ 'ಸುಬ್ಬರಾಮಯ್ಯನವರ ಸ್ನೇಹ ಸೌಹಾರ್ದತೆ', ಶ್ರೀಮತಿ ಅಂಬುಜಾ ನಾರಾಯಣ್ 'ಸುಬ್ಬರಾಮಯ್ಯನವರ ಜೀವನ ಪರಿಚಯ'ದ ಬಗ್ಗೆ ತಮ್ಮ ಅನುಭವಗಳನ್ನು ತಿಳಿಸಿದರು. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಮಾಡುತ್ತಿರುವ ಶ್ರೀ ಶ್ರೀಕಾಂತರ ನಾಗೇಂದ್ರ ಶಾಸ್ತ್ರಿಗಳು, 1923ರಲ್ಲಿ ಸುಬ್ಬರಾಮಯ್ಯನವರಿಂದ H.M.V. Gramaphoneನಲ್ಲಿ ಧ್ವನಿ ಮುದ್ರಿತವಾದ 'ಉದರ ವೈರಾಗ್ಯವಿದು' 'ಮನುಜ ಶಂಕವಿದೇನು ಸುಖ' ದೇವರ ನಾಮಗಳನ್ನು ಧ್ವನಿ ವರ್ಧಕ ಮೂಲಕ ಸಭೆಯಲ್ಲಿ ಪ್ರಸಾರ ಮಾಡಿದರು. ದಿವಂಗತರ ಧ್ವನಿ ಕೇಳಿ, ಅವರ ಶಿಷ್ಯರುಗಳು, ಕುಟುಂಬ ವರ್ಗದವರು ಹಾಗೂ ಸಭಿಕರು ಪುಳಕಿತರಾದರು. ಈ ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ವಹಿಸಿದ್ದ ಮಹಾ ಮಹೋಪಾಧ್ಯಾಯ ಡಾ. ರಾ. ಸತ್ಯ ನಾರಾಯಣರವರು, ಭಾಷಣಕಾರರು ವಿಷಯಗಳನ್ನು ತಮ್ಮ ಅನುಭವಗಳನ್ನು ಸ್ವಾರಸ್ಯಕರವಾಗಿ ತಿಳಿಸಿರುವುದರಿಂದ ಅನೇಕ ಸಂಗತಿಗಳು ಬೆಳಕಿಗೆ ಬಂದಿದೆಯೆಂದೂ, ವಿಚಾರ ಸಂಕಿರಣವು ತಮಗೆ ತೃಪ್ತಿಯನ್ನು ನೀಡಿದೆಯೆಂದು ತಿಳಿಸಿ ಮುಂದಿನ ಪೀಳಿಗೆಗೆ ಅನುಕೂಲವಾಗುವಂತೆ, ಈ ವಿಷಯಗಳನ್ನೊಳಗೊಂಡ ಡಿ. ಸುಬ್ಬರಾಮಯ್ಯ ನವರ ಬಗ್ಗೆ ಪುಸ್ತಕವೊಂದನ್ನು ಹೊರತರಬೇಕೆಂದು ಕರೆ ಇತ್ತರು.



*ಶ್ರೀ ಡಿ. ಸುಬ್ಬರಾಮಯ್ಯನವರ ಶತಮಾನಮಾನೋತ್ಸವದಲ್ಲಿ ವಿಚಾರ ಸಂಕಿರಣದಲ್ಲಿ ಭಾಗವಹಿಸಿದ್ದ ಶ್ರೀ ನಾಗಭೂಷಣರವರಿಗೆ ಡಾ. ರಾ. ಸತ್ಯನಾರಾಯಣ ಗೌರವಿಸುತ್ತಿರುವುದು.*

ಉತ್ಸವ ಅಂಗವಾಗಿ ಏರ್ಪಡಿಸಿದ್ದ ರಾಗಶ್ರೀ ಸಂಗೀತ ಸಮ್ಮೇಳನ ಉತ್ಸವದಲ್ಲಿ, ವಿದುಷಿ ಟಿ.ಎಸ್. ಸತ್ಯವತಿಯವರಿಂದ ಸಂಗೀತ ಕಚೇರಿ, ಸಂಗೀತ ಕಲಾರತ್ನ ಪ್ರೊ. ಎಸ್.ಕೆ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ, ವಿದ್ವತ್ ಗೋಷ್ಠಿ, ವಿದ್ವಾನ್ ಚಂದ್ರಮೌಳಿಯವರಿಂದ ಲಯ ವಾದ್ಯ ಪ್ರದರ್ಶನ, ವಿದ್ವಾನ್ ಎಚ್.ಸಿ. ರಾಮಾಚಾರ್‌ರವರಿಂದ ಖಂಜಿರದ ಪ್ರಾತ್ಯಕ್ಷಿಕೆ, ಯುವ ಕಲಾವಿದರಾದ ಎಂ.ಎಲ್. ಕಾರ್ತಿಕ್‌ರವರಿಂದ ಗಾಯನ, ವಿದ್ವಾನ್ ಶೃಂಗೇರಿ ನಾಗರಾಜ್‌ರವರಿಂದ ಸಂಗೀತ ಕಚೇರಿ, ಕುಮಾರಿ ಅಪೂರ್ವ ಮತ್ತು ಶ್ರೀಮತಿ ರುಕ್ಮಿಣಿ ವಿಜಯಕುಮಾರ್‌ರವರಿಂದ ಭರತ ನಾಟ್ಯ ಪ್ರದರ್ಶನ, ರಾಗಶ್ರೀ ಕಾಲೇಜಿನ ವಿದ್ಯಾರ್ಥಿ ವೃಂದದಿಂದ ಗಾಯತ್ರಿ ರಾಮಾಯಣ ಸಂಗೀತ ರೂಪಕ, ಶ್ರೀಮತಿ ರಾಧಿಕಾ ನಂದಕುಮಾರ್‌ರವರಿಂದ 'ಭರತನಾಟ್ಯದಲ್ಲಿ ಅಭಿನಯ' ವಿಷಯದಲ್ಲಿ ಉಪನ್ಯಾಸ ಪ್ರಾತ್ಯಕ್ಷಿಕೆ, ವಿದುಷಿ ವಸಂತ ಮಾಧವಿ (ಗಾಯನ) ಶ್ರೀನಿವಾಸ ವರ್ಮ (ಚಿತ್ರ ಬಿಡಿಸುವಿಕೆ)ರವರಿಂದ ಶ್ರೀ ಶಂಕರಾಚಾರ್ಯ ಸ್ತೋತ್ರಗಳನ್ನೊಳಗೊಂಡ 'ಗೀತ-ಚಿತ್ರ' ಕಾರ್ಯಕ್ರಮ, ವಿದುಷಿ ಜಯಂತಿ ಕುಮಾರೇಶ್‌ರವರಿಂದ ವೀಣಾ ವಾದನ ಕಾರ್ಯಕ್ರಮಗಳು ನಡೆದುವು. ರಾಗಶ್ರೀ ಸಂಗೀತ ಸಮ್ಮೇಳನದ ಅಧ್ಯಕ್ಷತೆಯನ್ನು ಲಯ ವಾದ್ಯ ನಿಪುಣ ವಿದ್ವಾನ್ ಎಚ್.ಪಿ. ರಾಮಾಚಾರ್ ವಹಿಸಿದ್ದು, ಅವರಿಗೆ 'ಗಾಂಧರ್ವ ವಿದ್ಯಾನಿಧಿ' ಪ್ರಶಸ್ತಿಯನ್ನಿತ್ತು ಸನ್ಮಾನಿಸಲಾಯಿತು. ಮಹಾ ಮಹೋಪಧ್ಯಾಯ ಡಾ. ರಾ. ಸತ್ಯ ನಾರಾಯಣರವರಿಗೆ 'ಲಲಿತ ಕಲಾಶ್ರಯ' ಪ್ರಶಸ್ತಿಯನ್ನಿತ್ತು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಲಲಿತ ಕಲೆಯ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಶ್ರೀಮತಿ ಭಾರ್ಗವಿ ನಾರಾಯಣ್, ವಿದ್ವಾನ್ ಹೊಸ ಹಳ್ಳಿ ಕೇಶವ ಮೂರ್ತಿ, ಶ್ರೀಮತಿ ಕನಕ ಮೂರ್ತಿ ಮತ್ತು ಪ್ರೊ. ಅಮರನಾಥ ಕೆರೋಡಿಯವರನ್ನು ಸನ್ಮಾನಿಸಲಾಯಿತು. ವಿದ್ವಾಂಸರುಗಳು, ಸಂಗೀತಜ್ಞರು, ಕಲಾವಿದರುಗಳ ನ್ನೊಳಗೊಂಡ ನಾಲ್ಕು ದಿನಗಳ ಕಾರ್ಯಕ್ರಮವು ಯಶಸ್ವಿಯಾಗಿ ಡಿ. ಸುಬ್ಬರಾಮಯ್ಯನವರ ಅರ್ಥಪೂರ್ಣ ಸ್ಮರಣೆ ಯಾಯಿತೆಂದು ಎಲ್ಲರೂ ಅಭಿಪ್ರಾಯಪಟ್ಟರು.

### ಗುರುತು ಕಥಾ ಸ್ಪರ್ಧೆ-2003

ಮುಂಬಯಿ ಪ್ರಕಾಶಿತ 'ಗುರುತು' ಪತ್ರಿಕೆಯು ಕಥಾ ಸ್ಪರ್ಧೆಯನ್ನು ಆಯೋಜಿಸಿದ್ದು ವಿವರಗಳು ಈ ಕೆಳಗಿನಂತಿವೆ.

ಕಥೆಯು ಅಪ್ರಕಟಿತವಾಗಿದ್ದು, ಫುಲ್‌ಸ್ಕೇಪ್ ಹಾಳೆಯ ಒಂದೇ ಮಗ್ಗುಲಿನಲ್ಲಿದ್ದು 8-10 ಪುಟಗಳನ್ನು ಮೀರಿರಬಾರದು. ಅನುವಾದಿತ ಕತೆಗಳಿಗೆ ಅಸ್ಪದವಿಲ್ಲ. ನಕಲು ಪ್ರತಿಗಳನ್ನು ಸ್ವೀಕರಿಸಲಾಗುವುದಿಲ್ಲ. ಕಥೆಗಾರರು ತಮ್ಮ ವಿಳಾಸ, ಭಾವಚಿತ್ರ ಮತ್ತು ಸ್ವಪರಿಚಯ ಪತ್ರವನ್ನು ಕಥೆಯ ಜೊತೆಗೆ ಬೇರೆಯಾಗಿ ಲಗತ್ತಿಸಿರಬೇಕು. ಅಪ್ರಕಟಿತ ಕಥೆಗಳನ್ನು ಹಿಂದಿರುಗಿ ಪಡೆಯಬಯಸುವವರು ಸಾಕಷ್ಟು ಅಂಚೆ ಚೀಟಿ ಹಚ್ಚಿದ ಸ್ವವಿಳಾಸವುಳ್ಳ ಲಕೋಟೆಯನ್ನು ಲಗತ್ತಿಸಿರಬೇಕು. ಬಹುಮಾನದ ಮೊತ್ತ ಪ್ರಥಮ 5,000/- ದ್ವಿತೀಯ 3,000/- ತೃತೀಯ 2,000/-

ಕಥೆಯನ್ನು ತಾ. 31-01-2003ರೊಳಗೆ ಕಳುಹಿಸಬೇಕಾದ ವಿಳಾಸ.

Editor:
**Gurutu Katha Spardha-2003**
Billawa Jagriti Balaga,
1. Motiwala Mansion,
Nadirshah Shukhia St., Fort,
Mumbai-400 001.

## ರಂಗೋಲಿ ಮನಸ್ಸಿನ ಭಾವನೆಗಳ ಅಭಿವ್ಯಕ್ತಿ - ಸುಮನ್ ಚಿಪಳೂಣ್‌ಕರ್

'ಭಾರತೀಯ ಸಂಸ್ಕೃತಿ ಮೇಲೆ ಪಾಶ್ಚಾತ್ಯ ಸಂಸ್ಕೃತಿ ಧಾಳಿ ಅತಿಯಾಗಿದೆ. ನಮ್ಮ ಸಂಸ್ಕೃತಿಯ ಉಜ್ವಲತೆಗೆ ರಂಗೋಲಿಯಂತಹ ಕಲೆಗಳಿಗೆ ಪ್ರೋತ್ಸಾಹ ನೀಡಬೇಕು. ಮಕ್ಕಳಲ್ಲಿ ಈ ಬಗ್ಗೆ ಕಾಳಜಿ ಮೂಡಿಸುವ ಪ್ರಯತ್ನ ಮಾಡಬೇಕು. ರಂಗೋಲಿಯು ಮನಸ್ಸಿನ ಭಾವನೆಗಳ ಅಭಿವ್ಯಕ್ತಿ. ಮನಸ್ಸಿನ ಭಾವನೆಗಳು ಬಣ್ಣಗಳ ಮೂಲಕ ಚಿತ್ರಿತವಾಗುತ್ತಿದೆ. ರಂಗೋಲಿ ನಿರ್ಮಲ ಮನಸ್ಸಿನ ಪ್ರತೀಕ' ಎಂದು ಖ್ಯಾತ ಶಿಕ್ಷಕಿ, ಸಮಾಜ ಸೇವಕಿ ಸುಮನ್ ಚಿಪಳೂಣ್‌ಕರ್ ಅಭಿಪ್ರಾಯಪಟ್ಟರು.

ಅವರು ಕರ್ನಾಟಕ ಸಂಘ ಮಹಿಳಾ ವಿಭಾಗ ಏರ್ಪಡಿಸಿದ ರಂಗೋಲಿ ಸ್ಪರ್ಧೆಯನ್ನು ಉದ್ಘಾಟಿಸಿ ಮಾತಾಡುತ್ತಿದ್ದರು. ಕರ್ನಾಟಕ ಸಂಘದ ಮಹಿಳಾ ವಿಭಾಗವು ತುಳಸಿ ಹಬ್ಬದಂದು ಈ ಸ್ಪರ್ಧೆಯನ್ನು ಆಯೋಜಿಸಿದ್ದರು. ನಮ್ಮ ಸಾಂಸ್ಕೃತಿಕ ಹಬ್ಬ, ಉತ್ಸವಗಳಲ್ಲಿ ಈ ರಂಗೋಲಿಯನ್ನು ಚಿತ್ರಿಸುವುದು ಮುಖ್ಯ ಎಂದು ಅಭಿಪ್ರಾಯಪಟ್ಟರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಸಂಘದ ಅಧ್ಯಕ್ಷರಾದ ರವಿ ರಾ. ಅಂಚನ್ ಮಾತನಾಡುತ್ತಾ 'ವಿದೇಶದಲ್ಲಿ, ಬುಡಕಟ್ಟು ಸಂಸ್ಕೃತಿಗಳಲ್ಲಿ ಮಣ್ಣು, ಪ್ರಕೃತಿ ಹಾಗೂ ಹೂವುಗಳಲ್ಲಿ ಬಳಸಿ ರಂಗೋಲಿಗಳನ್ನು ಬಿಡಿಸುತ್ತಾರೆ. ಇಂತಹ ಮನಸ್ಸುಗಳು ಅನಾದಿಕಾಲದಿಂದಲೂ ಇದೆ. ಗಣಿತ ಶಾಸ್ತ್ರಕ್ಕೆ ಮೂಲ ರಂಗೋಲಿ ಚಿತ್ರಿಕೆಗಳೇ ಇರಬಹುದೋ ಎಂದು ನನ್ನ ಭಾವನೆ. ಇದು ಅಭ್ಯಾಸ ಯೋಗ್ಯ ಎಂದರು.

ರಂಗೋಲಿ ಸ್ಪರ್ಧೆಯ ತೀರ್ಪುಗಾರರಾಗಿ ಲಕ್ಷ್ಮಿ ಆರ್. ಶೆಟ್ಟಿ, ಜಯಾ ರೇವಣ್‌ಕರ್, ವಸಂತ ಕಣ್ಣೆ ಭಾಗಹಿಸಿದ್ದರು. ಕಾರ್ಯಕ್ರಮದ ನಿರೂಪಣೆಯನ್ನು ಶೈಲಿನಿ ರಾವ್ ಮತ್ತು ಶೈಲಾ ಮೂರ್ತಿ ಮಾಡಿದರು.

---

ಅಸೋಸಿಯೇಶನ್‌ನಲ್ಲಿ...

*(ಪುಟ 2ರಿಂದ)*


ಈ ನೃತ್ಯ ರೂಪಕಕ್ಕೆ ನಟುವಾಂಗಂನಲ್ಲಿ ಶ್ರೀ ಗೋಪಾಲ್, ಶ್ರೀ ರವಿ ನಾಗರ್, ಶ್ರೀ ಯಾದವ್, ಶ್ರೀ ರಾಜೀವ ಶುಕ್ಲಾ, ಶ್ರೀ ಕಾತಿಕೇಯನ್ ಮತ್ತು ಶ್ರೀ ವಿಜಯ್ ಮೊದಲಾದವರು ಸಹಕಾರ ನೀಡಿದರು.

ಎರಡನೆಯ ಭಾಗದಲ್ಲಿ 'ಕಾರ್ಮೋಪಿ ಶ್ರೀ ಅವಾಜ್' ಎಂಬ ನೃತ್ಯ.

ಈ ನೃತ್ಯಕ್ಕೆ ಖ್ಯಾತ ಸಂಗೀತಗಾರ ಶ್ರೀ ಶಂಕರ್ ಮಹದೇವನ್ ಮತ್ತು ಶ್ರೀ ಶಿವಮಣಿ ಇವರು ಸಂಗೀತ ನೀಡಿದರು. ಶ್ರೀಮತಿ ನಳಿನಿ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವು ಮುಕ್ತಾಯವಾಯಿತು.

- ರಮಾ ವಸಂತ್

## ಅಗಲಿಕೆ



ಮೈಸೂರು ಅಸೋಸಿಯೇಷನ್ನಿನ ಹಿರಿಯ ಸದಸ್ಯರಾದ ಶ್ರೀ ಗಂಗಾಧರ ಮಿರ್ಜಿಯವರು ಅಕ್ಟೋಬರ್ 14ರಂದು ನಮ್ಮಿಂದ ಅಗಲಿದ್ದಾರೆ ಎಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ 80 ವರ್ಷಗಳಾಗಿದ್ದವು. ಕಳೆದ ವರ್ಷಗಳಲ್ಲಿ ತಮ್ಮ ಪತ್ನಿಯನ್ನು ಕಳೆದುಕೊಂಡಿದ್ದ ಶ್ರೀ ಮಿರ್ಜಿಯವರಿಗೆ ಮೂವರು ಗಂಡು ಮಕ್ಕಳಿದ್ದಾರೆ.

ವೃತ್ತಿಯಲ್ಲಿ ವಕೀಲರಾದ ಶ್ರೀ ಮಿರ್ಜಿಯವರು ಅನೇಕ ವರ್ಷಗಳು ಅಸೋಸಿಯೇಷನ್ನಿನ ಗೌ. ಕಾನೂನು ಸಲಹೆಗಾರರಾಗಿ ಸೇವೆ ಸಲ್ಲಿಸಿದ್ದಾರೆ. ನಮ್ರ ಸ್ವಭಾವದವರೂ ಮತ್ತು ಸ್ನೇಹಪರರೂ ಆದ ಶ್ರೀ ಮಿರ್ಜಿಯವರಿಗೆ ಅಸೋಸಿಯೇಷನ್ನಿನಲ್ಲಿ ಅನೇಕ ಸ್ನೇಹಿತರಿದ್ದಾರೆ.

ಮಿರ್ಜಿಯವರ ಕುಟುಂಬದವರಿಗೆ ಈ ಅಗಲಿಕೆಯನ್ನು ಸಹಿಸುವ ಶಕ್ತಿಯನ್ನು ಒದಗಿಸಲಿ ಎಂದು ನೇಸರು ಪ್ರಾರ್ಥಿಸುತ್ತದೆ.

***

ಮುಂಬೈಯಲ್ಲಿ, ಕಳೆದ 6 ದಶಕಗಳಿಂದ ಭರತನಾಟ್ಯಕ್ಷೇತ್ರದಲ್ಲಿ ಅಪಾರ ಸೇವೆ ಸಲ್ಲಿಸುತ್ತಾ ಬಂದಿರುವ ಹಿರಿಯಗುರು ಶ್ರೀ ಟಿ.ಕೆ. ಮಹಾಲಿಂಗಂ ಪಿಳ್ಳೆಯವರು ಡಿ. 6ರಂದು ನಮ್ಮಿಂದ ಅಗಲಿದರು ಎಂದು ತಿಳಿಸಲು ವಿಷಾದಿಸುತ್ತೇವೆ.

ಅವರಿಗೆ 85 ವರ್ಷಗಳಾಗಿದ್ದವು. ಗುರು ಮಹಾಲಿಂಗ ಪಿಳ್ಳೆ ಒಂದು ಪ್ರತಿಷ್ಠಿತ ತಂಜಾವೂರಿನ ಶೈಲಿಯ ಭರತನಾಟ್ಯದ ಪರಂಪರೆಯುಳ್ಳ ಮನೆತನದಲ್ಲಿ ಹುಟ್ಟಿದವರು. ಆ ಶೈಲಿಯನ್ನು ಉಳಿಸಿ ಬೆಳೆಸಿ, ಅನೇಕ ಖ್ಯಾತ ಶಿಷ್ಯರನ್ನು ತಯಾರು ಮಾಡಿದ ಯಶಸ್ಸು ಇವರಿಗೆ ಸೇರಿದ್ದು, ಸಂಗೀತ ನಾಟಕ ಅಕಾಡೆಮಿ, ಮಹಾರಾಷ್ಟ್ರ ಸರ್ಕಾರ, ತಮಿಳುನಾಡು ಸರ್ಕಾರ ಇವುಗಳಿಂದ ಗೌರವ ಪುರಸ್ಕಾರ ಬಿರುದುಗಳನ್ನು ಪಡೆದಿದ್ದರು. ಮೈಸೂರು ಅಸೋಸಿಯೇಷನ್ನೊಡನೆ ಇವರ ನಾಟ್ಯ ಸಂಸ್ಥೆಗೆ, ಕಳೆದ 4 ದಶಕಗಳಿಂದ ನಿಕಟ ಸಂಬಂಧವಿದೆ. ಇವರ ಅಗಲಿಕೆಯಿಂದ ಮುಂಬೈಯಿನ ಕಲಾಜಗತ್ತಿಗೆ ಅಪಾರ ನಷ್ಟವಾಗಿದೆ. ಗುರು ಮಹಾಲಿಂಗ ಪಿಳ್ಳೆಯವರ ಪರಿವಾರದವರಿಗೂ ಮತ್ತು ಅವರ ನಾಟ್ಯ ಸಂಸ್ಥೆಗೂ ಈ ಅಪಾರ ದುಃಖವನ್ನು ಸಹಿಸುವ ಶಕ್ತಿ ಒದಗಿಸಲೆಂದು ನೇಸರು ಪ್ರಾರ್ಥಿಸುತ್ತದೆ.

## CULTURAL AND SPORTS FESTIVAL 2001-2002

**TO BE HELD ON THE 21ST AND 22ND DEC - 2002.**

**TALENTS' DAY - 21-12-02 AT 4.00 P.M.**

**Events:**

a) **Below 5 years.**
   1) Fancy Dress
   2) Shloka

b) **5 to 8 years**
   1) Drawing
   2) Fancy Dress
   3) Action Songs

c) **9 to 12 years**
   1) Drawing
   2) Songs in Kannada
   3) Film Songs

d) **13 to 18 years**
   1) Drawing
   2) Pick-N-Speak
   3) Songs in Kannada

e) **19 to 25 years**
   1) Flower Arrangement
   2) Pick-N-Speak
   3) Bhavageete in Kannada

### SPORTS DAY

**22-12-2002**

**Time - 10 a.m.**

Venue - N.K.E.S. Grounds

a) **Below 5 years**
   1) Running Race
   2) Hit a Target

b) **6 to 9 years**
   1) Running Race
   2) Hit A Target
   3) Book Balancing

c) **10 to 15 years**
   1) Potato Race
   2) Running Race
   3) Lemon and Spoon

d) **16 to 25 years**
   1) Running Race
   2) Shot Put
   3) Aiming the Wicket

c) **26 to 40 years**
   1) Threading the needle
   2) Shot Put
   3) Book Balancing

f) **Above 40 Years**
   1) Brisk Walking
   2) Lemon and Spoon
   3) Shot Put

Musical Chair is common Event between 26 to 40 & above 40

Regn. No. 040155/83
Regn. No. TECH/47-202/MBI-2002
Date of Posting : 10-12-2002

# ಕರ್ನಾಟಕ ರಾಜ್ಯೋತ್ಸವ

'ಎಲ್ಲಾದರೂ ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು
ಕನ್ನಡ ಗೋವಿನ ಓ ಮುದ್ದಿನ ಕರು ಕನ್ನಡತನ ಒಂದಿದ್ದರೆ ನೀನೆಮ್ಮಗೆ ಕಲ್ಪತರು' -ರಾಷ್ಟ್ರಕವಿ ಕುವೆಂಪು

ಕನ್ನಡ ಕುಲಪುತ್ರರೆಲ್ಲರ ಅವಿರತ ಶ್ರಮ ಮತ್ತು ಮಹತ್ಕಾರ್ಯದ ಫಲವೇ ಏಕೀಕೃತ ಕರ್ನಾಟಕ. 1956 ನವೆಂಬರ್ 1ರಂದು ಚೆಲುವ ಕನ್ನಡನಾಡು 'ಕರ್ನಾಟಕ'ದ ಉದಯ.

ಈ ಕರ್ನಾಟಕ ಮನ ಪುಳಕಿತಗೊಳಿಸುವ ಪುಣ್ಯಭೂಮಿ. ಅಸಾಧಾರಣವಾದುದನ್ನು ಸಾಧಿಸಲು ಸ್ಫೂರ್ತಿ ನೀಡುವ ನೆಲ, ಕಲೆಗಳ ತವರು, ಸಾಹಿತ್ಯ ಸಂಸ್ಕೃತಿಗಳ ಆಗರ. ಜ್ಞಾನದ ಅಪೂರ್ವ ಭಂಡಾರ. ಪಂಪ, ರನ್ನ, ಪೊನ್ನ, ಜನ್ನರಂತಹ ಕವಿ ಪುಂಗವರೂ, ಬಸವ, ಅಲ್ಲಮರಂತಹ ಶ್ರೇಷ್ಠ ವಚನಕಾರರೂ, ದಾಸವರೇಣ್ಯರೂ ತಮ್ಮ ತನುಮನಧನಗಳಿಂದ ಕನ್ನಡ ಸಾಹಿತ್ಯ, ಸಂಸ್ಕೃತಿಯನ್ನು ಶ್ರೀಮಂತಗೊಳಿಸಿ ಚಿರಸ್ಮರಣೀಯರಾಗಿದ್ದಾರೆ. ಸಾಹಿತ್ಯ ಕ್ಷೇತ್ರದ ಅತ್ಯುನ್ನತ ಪ್ರಶಸ್ತಿ 'ಜ್ಞಾನಪೀಠ ಪ್ರಶಸ್ತಿ' ವಿಜೇತರಾದ ಕುವೆಂಪು, ದ.ರಾ. ಬೇಂದ್ರೆ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಶಿವರಾಮ ಕಾರಂತ, ವಿ.ಕೃ. ಗೋಕಾಕ್, ಯು.ಆರ್. ಅನಂತಮೂರ್ತಿ, ಗಿರೀಶ್ ಕಾರ್ನಾಡ್‌ರಂತಹ ಖ್ಯಾತ ಸಾಹಿತಿಗಳು, ಕಲಾವಿದರು, ಸಂಗೀತಜ್ಞರು, ವಿಜ್ಞಾನಿಗಳು, ಕ್ರೀಡಾಪಟುಗಳು ತಮ್ಮ ಅಪ್ರತಿಮ ಸಾಧನೆಗಳಿಂದ ವಿಶ್ವಭೂಪಟದಲ್ಲಿ ಕರ್ನಾಟಕದ ಛಾಪು ಮೂಡಿಸಿರುವುದು ನಾಡಿನ ಜನತೆ ಹೆಮ್ಮೆಪಡುವ ಸಂಗತಿ.

ಇಂತಹ ಶ್ರೇಷ್ಠ ಸಾಹಿತ್ಯ ಮತ್ತು ಸಂಸ್ಕೃತಿಯ ವಾರಸುದಾರರಾದ ನಾವು ಕನ್ನಡಾಂಬೆಯ ಕೀರ್ತಿ ಎಲ್ಲೆಡೆ ಮೊಳಗುವಂತೆ ಕಾರ್ಯತತ್ಪರರಾಗೋಣ. ಭಾವೈಕ್ಯತೆಯನ್ನು ಬೆಳಗೋಣ.

## ಸಾಂಸ್ಕೃತಿಕ ಪರಂಪರೆಯ ಪೋಷಣೆ

★ ಕಲೆ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಅಪ್ರತಿಮ ಸೇವೆ ಸಲ್ಲಿಸಿದ ಕಲಾವಿದರ ಮಾಸಾಶನವನ್ನು 250 ರಿಂದ 500 ರೂ.ಗಳಿಗೆ ಹೆಚ್ಚಿಸಲಾಗಿದೆ.

★ ವಿನೂತನ 'ದಾಸ ಸಾಹಿತ್ಯವಾಹಿನಿ' ಯೋಜನೆಯ ಮೂಲಕ ದಾಸವರೇಣ್ಯರ 16,000ಕ್ಕೂ ಹೆಚ್ಚು ದಾಸರ ಕೀರ್ತನೆಗಳನ್ನು ಕಂಪ್ಯೂಟರ್‌ನಲ್ಲಿ ಅಳವಡಿಸಿ ವಿಶ್ವದಲ್ಲೆಡೆ ಲಭ್ಯವಾಗುವಂತೆ ವ್ಯವಸ್ಥೆ ಕಲ್ಪಿಸಲಾಗಿದೆ.

★ ಯುವಜನಾಂಗದಲ್ಲಿ ಸಾಂಸ್ಕೃತಿಕ ಜಾಗೃತಿ ಮೂಡಿಸಲು ಯುವ ಪ್ರತಿಭೆ - 'ಸ್ಪಂದನ' ವಿಶೇಷ ಕಾರ್ಯಕ್ರಮ.

★ ಎಲ್ಲ ಕಲೆಗಳನ್ನೂ ಒಂದೇ ಸೂರಿನಡಿ ತರುವ 'ಕಲಾಗ್ರಾಮ' ಯೋಜನೆ.

★ ಸಾಹಿತ್ಯ ಸಂಗೀತ ಇತ್ಯಾದಿ ಕಲೆಗಳಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದ ಚೇತನಗಳಿಗೆ ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಪ್ರಶಸ್ತಿಗಳು.

★ ಸಾಂಸ್ಕೃತಿಕ ಡೈರೆಕ್ಟರಿ-ರಾಜ್ಯಾದ್ಯಂತ ಎಲ್ಲಾ ಜಾನಪದ ಮತ್ತು ಇತರ ಕಲಾವಿದರ ಮಾಹಿತಿ ಕಂಪ್ಯೂಟರ್‌ನಲ್ಲಿ ಅಳವಡಿಕೆ.

★ ಪ್ರಾಚ್ಯ ವಸ್ತುಗಳ ಡೈರೆಕ್ಟರಿ ಮೂಲಕ ರಾಜ್ಯದ 3,000ಕ್ಕೂ ಹೆಚ್ಚು ಐತಿಹಾಸಿಕ ಸ್ಮಾರಕಗಳು ಹಾಗೂ ಎಲ್ಲ ವಸ್ತು ಸಂಗ್ರಹಾಲಯಗಳ ಬಗ್ಗೆ ಮಾಹಿತಿ ಹಾಗೂ ಛಾಯಾಚಿತ್ರಗಳು ಕಂಪ್ಯೂಟರ್‌ನಲ್ಲಿ ಅಳವಡಿಕೆ.

★ ಸಾಂಸ್ಕೃತಿಕ ಚಟುವಟಿಕೆಗಳ ವಿಕೇಂದ್ರೀಕರಣ-ತಾಲ್ಲೂಕು ಕೇಂದ್ರ ಸಾಂಸ್ಕೃತಿಕ ಸಂಸ್ಥೆಗಳಿಗೆ 25,000 ರೂ.ಗಳ ಧನ ಸಹಾಯ.

## ಕನ್ನಡಕ್ಕೆ ಹೆಚ್ಚಿನ ಒತ್ತಾಸೆ

★ 1ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಬಿ.ಇ., ಎಂ.ಬಿ.ಬಿ.ಎಸ್. ಮತ್ತು ಬಿ.ಡಿ.ಎಸ್. ಕೋರ್ಸುಗಳ ಪ್ರವೇಶದಲ್ಲಿ ಶೇ. 5ರಷ್ಟು ಸಮಾನಾಂತರ ಒಳಮೀಸಲಾತಿ.

★ ವೃತ್ತಿ ಶಿಕ್ಷಣ ಮತ್ತು ಉನ್ನತ ಶಿಕ್ಷಣದ ಇತರೆ ಕೋರ್ಸುಗಳಿಗೂ ಶೇ. 5ರಷ್ಟು ಸಮಾನಾಂತರ ಮೀಸಲಾತಿಯ ವಿಸ್ತರಣೆ.

★ 1ರಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ವಿದ್ಯಾರ್ಥಿಗಳಿಗೆ ಸರಕಾರಿ ಉದ್ಯೋಗಗಳಲ್ಲಿ ಶೇ. 5ರಷ್ಟು ಸಮಾನಾಂತರ ಒಳಮೀಸಲಾತಿ.

★ ತಾಂತ್ರಿಕ ಮತ್ತು ವೈದ್ಯಕೀಯ ಪದವಿ ಕೋರ್ಸುಗಳಲ್ಲಿ ಮೊದಲ ವರ್ಷದಲ್ಲಿ ಒಂದು ಪಠ್ಯ ವಿಷಯವಾಗಿ ಕನ್ನಡದ ಅಳವಡಿಕೆ.

★ ಪದವಿ ಪೂರ್ವ ತರಗತಿಯಲ್ಲಿ ಐಚ್ಛಿಕ ಕನ್ನಡ ವಿಷಯ ಆರಂಭ.

**ಸರ್ವರಿಗೂ 47ನೇ ಕನ್ನಡ ರಾಜ್ಯೋತ್ಸವದ ಶುಭಾಶಯಗಳು.**

**ಕರ್ನಾಟಕ ವಾರ್ತೆ**

Edited, Printed & Published by M.A.N. Prasad, On behalf of the Mysore Association, Mumbai. Tel.: 2402 4647
Printed at Aarati Art Printers, Fort, Mumbai-400 001. * 2266 3361 / 2266 5938